بِسۡمِ اللہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ಸಂಚಿಕೆ: 16

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22 ಏಪ್ರಿಲ್ 2021, 22 ಶಹಾದತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
09 ರಮಝಾನ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يَاَيُّهَا الَّذِيْنَ اٰمَنُوْٓا اَوْفُوْا بِالْعُقُوْدِ

(ಅಲ್‌ಮಾಇದ: 02)

ಅಂದರೆ: ಎಲ್ಲೈ ವಿಶ್ವಾಸಿಗಳೇ, (ನೀವು) ಕರಾರುಗಳನ್ನು ಪಾಲಿಸಿರಿ.

يَاَيُّهَا الَّذِيْنَ اٰمَنُوْا لَا تُحِلُّوْا شَعَآئِرَ اللّٰهِ

(ಅಲ್‌ಮಾಇದ: 03)

ಅಂದರೆ: ಎಲ್ಲೈ ವಿಶ್ವಾಸಿಗಳೇ, ಅಲ್ಲಾಹನು ಪವಿತ್ರೀಕರಿಸಿದ ಕುರುಹುಗಳನ್ನು ನೀವು ಅಗೌರವದಿಂದ ಕಾಣಬೇಡಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ದುಆ ಎ ಇಸ್ತಿಖಾರಃ

اَللّٰهُمَّ اِنِّىْ اَسْتَخِيْرُكَ بِعِلْمِكَ وَاَسْتَقْدِرُكَ بِقُدْرَتِكَ وَاَسْاَلُكَ مِنْ فَضْلِكَ الْعَظِيْمِ فَاِنَّكَ تَقْدِرُ وَلَا اَقْدِرُ وَتَعْلَمُ وَلَا اَعْلَمُ وَاَنْتَ عَلَّامُ الْغُيُوْبِ اَللّٰهُمَّ اِنْ كُنْتَ تَعْلَمُ اَنَّ هٰذَا الْاَمْرَ خَيْرٌ لِّىْ فِىْ دِيْنِىْ وَمَعَاشِىْ وَعَاقِبَةِ اَمْرِىْ (اَوْقَالَ عَاجِلِ اَمْرِىْ وَآجِلِهٖ) فَاقْدُرْهُ لِىْ وَيَسِّرْهُ لِىْ ثُمَّ بَارِكْ لِىْ فِيْهِ وَاِنْ كُنْتَ تَعْلَمُ اَنَّ هٰذَا الْاَمْرَ شَرٌّ لِّىْ فِىْ دِيْنِىْ وَمَعَاشِىْ وَعَاقِبَةِ اَمْرِىْ (اَوْقَالَ فِىْ عَاجِلِ اَمْرِىْ وَآجِلِهٖ) فَاصْرِفْهُ عَنِّىْ وَاصْرِفْنِىْ عَنْهُ وَاقْدُرْ لِىَ الْخَيْرَ حَيْثُ كَانَ ثُمَّ اَرْضِنِىْ بِهٖ قَالَ وَيُسَمِّىْ حَاجَتَهٗ

ಓ ನನ್ನ ಪ್ರಭುವೇ? ನಾನು ನಿನ್ನ ಜ್ಞಾನದಿಂದ ಒಳಿತನ್ನು ಬಯಸುತ್ತೇನೆ. ನಿನ್ನ ಶಕ್ತಿ ಸಾಮರ್ಥ್ಯದ ಮೇರೆಗೆ ಶಕ್ತಿಯನ್ನು ಬಯಸುವೆ. ನಿನ್ನ ಅಪಾರವಾದ ಅನುಗ್ರಹಗಳಿಂದ ಅನುಗ್ರಹವನ್ನು ಬೇಡುವೆ. ನೀನು ಶಕ್ತನು. ನಾನು ಅಶಕ್ತನು. ನೀನು ಜ್ಞಾನಿ, ನಾನು ಅಜ್ಞಾನಿ, ನೀನು ಎಲ್ಲವನ್ನು ಬಲ್ಲವನಾಗಿದ್ದೆ, ಓ ನನ್ನ ಅಲ್ಲಾಹನೇ! ನನ್ನ ಈ ಕಾರ್ಯ ನನಗೆ ಧರ್ಮದ ನೆಲೆಯಲ್ಲಿ ಮತ್ತು ಜೀವನ ಆಧಾರದಲ್ಲಿ ಪರಿಣಾಮಕಾರಿಯಾಗುವುದಿದ್ದರೆ (ಅಥವಾ ಭವಿಷ್ಯದಲ್ಲಿ ಉತ್ತಮವಾಗುವುದಿದ್ದರೆ) ನನಗೆ ಮಾರ್ಗದರ್ಶನ ನೀಡು ಮತ್ತು ಅದನ್ನು ನನಗೆ ಸರಳಗೊಳಿಸು ಮತ್ತು ಅದರಲ್ಲಿ ನನಗೆ ಕರುಣೆದೋರು. ಹಾಗೆಯೇ ಈ ನನ್ನ ಕಾರ್ಯ ನನ್ನ ಧರ್ಮದ ನೆಲೆಯಲ್ಲಿ ನನ್ನ ಜೀವನಾಧಾರಕ್ಕಾಗಿ ಮತ್ತು ಅದರ ಪರಿಣಾಮಕಾರಿ ದೃಷ್ಟಿಯಿಂದ ನಷ್ಟ ಹೊಂದುವಂತಿದ್ದರೆ (ಅಥವಾ ಭವಿಷ್ಯದಲ್ಲಿ ನಷ್ಟ ಹೊಂದುವಂತಿದ್ದರೆ ನನಗೆ ಅದರಿಂದ ದೂರಿಕರಿಸು. ಯಾವುದರಲ್ಲಿ ಒಳಿತಿದೆಯೋ ಅದು ನನಗೆ ನೀಡು. ಅದರ ಮೇಲೆ ನನಗೆ ತೃಪ್ತಿ ಹೊಂದುವಂತೆ ಮಾಡು. ವರದಿಗಾರರು ಹೇಳುತ್ತಾರೆ. ಅವರು ನುಡಿದರು. ದುಆದಲ್ಲಿ ನೀವು ಬಯಸುವ ಕಾರ್ಯದ ಹೆಸರನ್ನು ಉಚ್ಛರಿಸಿರಿ.**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುತ್ತಹಜ್ಜುದ್, ಮುದ್ರಣ ಖಾದಿಯಾನ್ 2006)**

## ನನ್ನ ಜಮಾಆತ್‌ನವರು ನಿಜವಾದ ಭಯಭಕ್ತಿಯುಳ್ಳವರಾಗಲು ನಾನು ಏನು ಮಾಡಲಿ ಎಂದು ನನ್ನ ಹೃದಯವು ಕಳವಳಗೊಳ್ಳುತ್ತದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಿಶ್ಚಯವಾಗಿಯೂ ನೆನಪಿಡಿರಿ. ಅಲ್ಲಾಹನು ತನ್ನ ದಾಸರನ್ನು ಎಂದೂ ಕೈಬಿಡುವುದಿಲ್ಲ. ಅವನು ಆಗಮಿಸಿದ ಉದ್ದೇಶ ಪೂರ್ಣವಾಗುವವರೆಗೆ ಅವನಿಗೆ ಮರಣ ನೀಡುವುದಿಲ್ಲ. ಜನರು ಅವನನ್ನು ಎಷ್ಟೇ ದ್ವೇಷಿಸಲಿ, ಯಾರು ಎಷ್ಟೇ ಶಾಪ ಹಾಕಲಿ, ಅವನಿಗೆ ಹಾನಿ ಆಗದು.

ಈ ಭಾವನೆ ಬರಲು ಕಾರಣವೇನೆಂದರೆ ಯಾರೋ ಹೇಳಿದರು ಈಗ ನಮ್ಮ ಎದುರಾಳಿಯಾದ ದೇವವಾಣಿ ಪಡೆದ (ಮುನ್ಶಿ ಇಲಾಹಿ ಬಕ್ಷ್ ಅಕೌಂಟೆಂಟ್ ಲೇಖಕರು ಅಸಾ ಎ ಮೂಸ) ಸಾಹಿಬ್ ಹೇಳುತ್ತಾರೆ. ಈ ಸಂಘಟನೆಯ ವಿನಾಶ ಸಮೀಪಿಸುತ್ತಿದೆ. ಕಬುರತ್ ಕಲಿಮತನ್ ತಖ್ರುಜು ಮಿನ್ ಅಫ್ವಾಹಿಹಿಮ್ ಇಂಯ್ಯಖೂಲು ಇಲ್ಲಾ ಕಝಿಬ (ಅಲ್ ಕಹಫ್:6) ಮತ್ತು ತುಂಬ ನೊಂದ ಮನಸ್ಸಿನಿಂದ ಹೇಳಿದರು.

ನಿನ್ನೆ (ಅಂದರೆ 22 ಜೂನ್ 1891) ಹಲವು ಸಲ ದೇವವಾಣಿಯಾಯಿತು. “ನೀವು ಭಯ ಭಕ್ತಿಯುಳ್ಳವರಾಗಿರಿ ಮತ್ತು ಭಕ್ತಿಯ ಸೂಕ್ಷ್ಮ ದಾರಿಗಳಲ್ಲಿ ನಡೆಯುವವರಾಗಿ ಅಲ್ಲಾಹನು ನಿಮ್ಮೊಂದಿಗಿರುವನು. ಅದರಿಂದ ನನ್ನ ಹೃದಯ ತುಂಬ ಕಳವಳಗೊಳ್ಳುತ್ತದೆ. ನಾನು ಏನು ಮಾಡಲಿ? ಹೇಗೆ ನನ್ನ ಜಮಾಅತ್ ನಿಜವಾದ ಭಯಭಕ್ತಿಯುಳ್ಳವರಾಗಬಹುದು? ನಾನು ಎಷ್ಟು ಪ್ರಾರ್ಥಿಸುತ್ತೇನೆಂದರೆ ಬಲಹೀನತೆ ಉಂಟಾಗುತ್ತದೆ ಮತ್ತು ಕೆಲವೊಮ್ಮೆ ಮೂರ್ಛೆ ತಪ್ಪಿ ಸಾವು ಅನುಭವಿಸಿದಂತಾಗುತ್ತದೆ. ಎಲ್ಲಿಯವರೆಗೆ ಜಮಾಅತ್‌ನವರು ಅಲ್ಲಾಹನ ದೃಷ್ಟಿಯಲ್ಲಿ ಭಕ್ತಿಯುಳ್ಳವರಾಗುವುದಿಲ್ಲವೋ ಅಲ್ಲಾಹನ ಸಹಾಯ ದೊರೆಯಲು ಸಾಧ್ಯವಿಲ್ಲ. ಭಯ ಭಕ್ತಿಯು ಎಲ್ಲ ಪವಿತ್ರ ಗ್ರಂಥಗಳಾದ ತೌರಾತ್ ಹಾಗೂ ಇಂಜೀಲ್ ಶಿಕ್ಷಣಗಳ ಸಾರಾಂಶವಾಗಿದೆ. ಪವಿತ್ರ ಖುರ್‌ಆನ್ ಈ ಒಂದೇ ಪದದಿಂದ ಅಲ್ಲಾಹನ ಮಹೋನ್ನತ ವಿಜಯ ಮತ್ತು ಸಂಪ್ರೀತಿಯನ್ನು ಪ್ರಕಟಪಡಿಸಿದೆ. ನಾನು ನನ್ನ ಜಮಾಅತ್ ಅನ್ನು ನಿಜವಾದ ಭಯಭಕ್ತಿಯುಲ್ಲವರ, ಲೌಕಿಕತೆಯ ಮೇಲೆ ಧರ್ಮವನ್ನು ಪ್ರಾಧಾನ್ಯತೆ ನೀಡುವವರ ಹಾಗೂ ಅಲ್ಲಾಹನನ್ನು ಮರೆತವರನ್ನು ಪ್ರತ್ಯೇಕಗೊಳಿಸಿ, ಕೆಲ ಧಾರ್ಮಿಕ ಕರ್ತವ್ಯಗಳನ್ನು ಅವರಿಗೆ ಒಪ್ಪಿಸುವೆನು ಮತ್ತು ಲೌಕಿಕ ಆಗುಹೋಗುಗಳಲ್ಲಿಯೇ ಮುಳುಗಿರುವವರನ್ನು ಮತ್ತು ಹಗಲಿರುಗಳು ಲೋಕಾಭಿರಾಮ ಪಡೆಯ ಬಯಸುವವರನ್ನು ನಿರ್ಲಕ್ಷಿಸುವೆನು.

ಈಗಂತೂ ಅಲ್ಲಾಹನ ಹೊರತು ಯಾರೂ ನನ್ನವರಲ್ಲ. ತಮ್ಮವರು ಪರರು ಎಲ್ಲರೂ ನನ್ನ ಅವಮಾನವನ್ನೇ ಬಯಸುವವರಾಗಿದ್ದಾರೆ. ಹಗಲಿರುಳು ನನ್ನ ಸೋಲು, ಸಂತೋಷಗಳ ಪ್ರತೀಕ್ಷೆಯಲ್ಲಿದ್ದಾರೆ. ಈಗ ಅಲ್ಲಾಹನು ನನ್ನ ಸಹಾಯಕ್ಕೆ ಬರಲಿಲ್ಲ ಎಂದರೆ ನನ್ನ ಗತಿ ಏನಾದೀತು?

**(ಮಲ್ಫೂಝಾತ್ ಸಂಪುಟ–1, ಪು–276, ಮುದ್ರಣ ಖಾದಿಯಾನ್ 2018)**

## ಪ್ರವಾದಿಗಳಿಗೆ ತಮ್ಮ ಸತ್ಯಸಂಧತೆ ಮತ್ತು ಅಲ್ಲಾಹನ ವಾಗ್ದಾನಗಳ ಮೇಲೆ ಎಷ್ಟೊಂದು ಭರವಸೆಯಿರುತ್ತದೆ ಎಂದರೆ ಅವರು ವಿರೋಧಿಗಳನ್ನು ಲೆಕ್ಕಿಸುವುದೇ ಇಲ್ಲ. ಬದಲು ಅವರನ್ನು ಇನ್ನಷ್ಟು ಕೆರಳಿಸುತ್ತಾರೆ. ಅದಾಗ್ಯೂ ಅವರು ತೃಪ್ತಿ ಹೊಂದಿ ಅಂತಿಮವಾಗಿ ನಾವೇ ಜಯಶಾಲಿಗಳಾಗುವೆವು ಎನ್ನುತ್ತಾರೆ.

ಸೂರು: ಯೂನೂಸಿನ ವಚನ 72 **ವತ್ಲೂ ಅಲೈಹಿಮ್ ನಬಅ ನೂಹಿನ್ ಇಝ್ ಖಾಲ ಲೊಖೌಮಿಹೀ ಯಾ ಖೌಮಿ ಇನ್ ಕಾನ ಕಬುರ ಅಲೈಕುಮ್ ಮಖಾಮಿ ವತಝ್‌ಕೀರಿ ಬಿಆಯಾತಿಲ್ಲಾಹಿ ಫಅಲಲ್ಲಾಹಿ ತವಕ್ಕಲ್‌ತು ಫಅಜ್‌ಮಿಊ ಅಮ್ರಕುಮ್ ವ ಶುರಕಾಅಕುಮ್ ಸುಮ್ಮ ಲಾ ಯಕುನ್ ಅಮ್ರುಕುಮ್ ಅಲೈಕುಮ್ ಗಮ್ಮತನ್ ಸುಮ್ಮಖ್‌ಝೂ ಇಲೈಯ ವಲಾ ತುನ್‌ಝಿರೂನ್**. ನ ವ್ಯಾಖ್ಯಾನ ಮಾಡುತ್ತಾ ಹಝ್ರತ್ ಮುಸ್‌ಲಿಹ್ ಮೌಊದ್(ರ) ಹೇಳುತ್ತಾರೆ.

ಈ ವಚನದಲ್ಲಿ ಸಂಪೂರ್ಣ ಫಲದಾಯಕ ಯೋಜನೆಗಳನ್ನು ಹೇಗೆ ಹಾಕಿಕೊಳ್ಳಬಹುದು ಎಂದು ವಿವರಿಸಲಾಗಿದೆ. ಅದಕ್ಕಾಗಿ ಐದು ವಿಧಾನಗಳನ್ನು ಸೂಚಿಸಲಾಗಿದೆ.

1) ಎಲ್ಲರೂ ಒಟ್ಟುಗೂಡಿ ಒಮ್ಮತಾಭಿಪ್ರಾಯಕ್ಕೆ ಬರಬೇಕು. ಎಲ್ಲಿಯವರೆಗೆ ಅದನ್ನು ಸಾಧಿಸುವುದಿಲ್ಲವೋ ವಿಜಯ ದೊರಕದು.

2) ಒಮ್ಮತ ಹೊಂದಿದ ಜನರನ್ನು ವ್ಯವಸ್ಥಿತಗೊಳಿಸಬೇಕು.

3) ಆ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು ಅಥವಾ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ನೂರುಲ್–ಹಖ್ ಗ್ರಂಥದ ಪ್ರತಿರೂಪ ಬರೆದರೆ ಪಾದರಿ ಇಮಾಮುದ್ದೀನ್‌ಗೆ ಐದು ಸಾವಿರ ರೂಪಾಯಿಗಳ ಬಹುಮಾನ.

ಹಿಂದಿನ ಸಂಚಿಕೆಯಲ್ಲಿ ಫಾದರಿ ಇವಾದುದ್ದೀನ್ ಜಂಗೆ ಮುಖದ್ದಸ್‌ನಲ್ಲಿ ಕ್ರೈಸ್ತ ಮತಕ್ಕೆ ಆದ ಸೋಲಿನ ಕೋಪ ತಣಿಸಲು ಮಾಡಿದ ವಿವರಗಳನ್ನು ನೀಡಿದೆವು. ಅದರಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ಅವನು ಬಯ್ಗುಳಗಳನ್ನು ಹಾಕುತ್ತಿದ್ದನು. ಪವಿತ್ರ ಖುರ್‌ಆನ್‌ನ ಮೇಲೆ ಆಕ್ಷೇಪಗಳನ್ನು ಎತ್ತಿದನು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಸರಕಾರದ ದಂಗೆಕೋರ ಮತ್ತು ಜಹಾದಿ ಎಂದು ಬರೆದಿದ್ದನು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಬ್ರಿಟಿಷ್ ಇಂಡಿಯಾದಲ್ಲಿ ಪ್ರಸಕ್ತ ಸಮಯ ಬಹುತೇಕ ಪಾದರಿಗಳ ಕಾರ್ಯವು ನಮ್ಮ ನಬಿ(ಸ) ನಮ್ಮ ನಾಯಕರಾದ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಬಯ್ಯುವುದನ್ನೆ ತನ್ನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ, ಅವರೆಲ್ಲರಲ್ಲಿ ಫಾದರಿ ಇಮಾಬುದ್ದೀನ್ ಒಂದು ಹೆಜ್ಜೆ ಮುಂದಿದ್ದಾನೆ. ಈ ಪೈಕಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸುವೆವು. ಮತಭ್ರಷ್ಟ ಕ್ರೈಸ್ತ ಪಾದರಿಯು ಏಕೆ ಇಸ್ಲಾಮ್ ಧರ್ಮ ಮತ್ತು ಇಸ್ಲಾಮ್ ಧರ್ಮದ ಸ್ಥಾಪಕರನ್ನು ಬಯ್ಯುತ್ತಿದ್ದನು.

**ಇಸ್ಲಾಮ್ ಮತಕ್ಕಾಗಿ ಪಾದರಿಗಳನ್ನು ಅವರಿಗೆ ತಕ್ಕದಾದ ಕಾರ್ಯ ಕೈಗೊಳ್ಳುವುದು ವಿಹಿತ**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ತುಂಬ ಅಚ್ಚರಿಯನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ. ಅವರಿಗೆ ಅಲ್ಲಾಹನ ಪವಿತ್ರ ದಾಸರನ್ನು ಮತ್ತು ಸಜ್ಜನರನ್ನು ಬಯ್ಯಲು ಏತಕ್ಕಾಗಿ ಮುಕ್ತವಾಗಿ ಬಿಟ್ಟು ಬಿಟ್ಟಿದ್ದಾರೆ. ಅವರಲ್ಲಿ ಎಲ್ಲರನ್ನು ಅವರಿಗೆ ತಕ್ಕುದಾದ ಕೆಲಸ ಕೊಟ್ಟು ಮಗ್ನನಾಗುವಂತೆ ಮಾಡಬೇಕಾಗಿದೆ. ಆಗ ಅವರಿಂದ ಇಂತಹ ನೀಚ ಪಾಪಗಳು ಆಗದಿರಬಹುದು. ಅವರು ಅತ್ಯಂತ ಅಮೂಲ್ಯವಾದ ಸಲಹೆಗಳನ್ನು ನೀಡುತ್ತ ಹೇಳಿದರು.

ಅವರ ಹಿರಿಯರು ಮುಖಂಡರು ಏಕೆ ಅವರನ್ನು ಕೆಟ್ಟ ಮಾತುಗಳಿಂದ ತಡೆಯುವುದಿಲ್ಲ. ಮತ್ತು ಏಕೆ ಪಾಪಗಳೆಡೆ ಹೆಜ್ಜೆಗಳನೀಡುವುದರಿಂದ ನಿಷೇಧಿಸುವುದಿಲ್ಲ. ಏಕೆ ಅವರನ್ನು ಮುಕ್ತರನ್ನಾಗಿ ಬಿಟ್ಟುಬಿಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಉಚಿತ ಅನಿಸುವುದೇನೆಂದರೆ ಅವರು ಸಮುದಾಯಕ್ಕೆ ಮತ್ತು ವ್ಯಕ್ತಿಗೆ ಘನತೆ ದೊರೆಯುವಂತಹ ಸೇವೆಯಲ್ಲಿ ತೊಡಗಿಸಬೇಕಾಗಿದೆ. ಅವರಲ್ಲಿ ಬಡಗಿ ಆಗಿದ್ದಲ್ಲಿ ಅವರ ಕೈಯಲ್ಲಿ ಕೊಡಲಿ ನೀಡಬೇಕು, ಸದಾಘಾಗಿದ್ದರೆ ಅವರ ಕೈಯಲಿ ಹತ್ತಿಬಿಡಿಸುವ ಯಂತ್ರ. ಕ್ಷೌರಿಕನಾಗಿದ್ದರೆ ಉಸ್ತ್ರ ಸೇಲಿಯಾಗಿದ್ದರೆ ಘಾಣ ಎಳೆಯಲು ಎತ್ತು ಕೈಜೊಡಿಸಬೇಕಾಗಿದೆ. ಆಗ ಪ್ರತಿಯೊಬ್ಬನು ಆಯಾಯ ಕಾರ್ಯದಲ್ಲಿ ಮಗ್ನನಾಗುವನು. ಅದರಿಂದ ಆ ವ್ಯವಸ್ಥೆಯಿಂದ ಅನಾವಶ್ಯಕ ಪಾಪ ಕೃತ್ಯಗಳಿಂದ ದೂರವಾಗಿರಬಹುದು. ಅದರಿಂದ ಜನರಿಗೆ ಮತ್ತು ಅಲ್ಲಾಹನ ದಾಸರಿಗೆ ಅವರ ಪಿತೂರಿಗಳಿಂದ ಮತ್ತು ತಪ್ಪುಗಳಿಂದ ವಿರಾಮ ದೊರೆಯಬಹುದು. ಈ ವ್ಯವಸ್ಥೆಯಿಂದ ಅವರ ಮುಖಂಡರ ಸಮಯ ವ್ಯರ್ಥವಾಗುವುದರಿಂದ ಉಳಿಯಬಹುದು." (ನೂರುಲ್‌ಹಖ್, ರೂಹಾನಿ ಖಝಾಇನ್, ಸಂಪುಟ–8, ಪುಟ–50)

ಒಬ್ಬ ಮುಸಲ್ಮಾನನು ಕ್ರೈಸ್ತನಾದರೆ ಹೇಗಾಗಬಹುದು. ಒಬ್ಬ ವಿದ್ಯಾವಂತ ಮುಸಲ್ಮಾನ ಇಸ್ಲಾಮ್ ಧರ್ಮದ ಜ್ಞಾನವು ಹೊಂದಿದವನು ಇಸ್ಲಾಮ್ ಧರ್ಮದಂತಹ ಉನ್ನತ ಮತ್ತು ಅತ್ಯುತ್ತಮ ಧರ್ಮವನ್ನು ಬಿಟ್ಟು ಹೇಗೆ ತಾನೇ ಕ್ರೈಸ್ತನಾಗಲು ಸಾಧ್ಯ? ನನಗೆ ತುಂಬ ಆಶ್ಚರ್ಯದ ಸಂಗತಿಯಾಗಿದೆ. ಅಲ್ಲಿ ಅವನಿಗೆ ಏಕದೇವತ್ವವನ್ನು ಬಿಟ್ಟು ತ್ರೀತ್ವ ಒಪ್ಪಿಕೊಳ್ಳಬೇಕಾಗುತ್ತದೆ ಮತ್ತು ಒಬ್ಬ ಮನುಷ್ಯನನ್ನು ದೇವರೆಂದು ನಂಬಬೇಕಾಗುತ್ತದೆ. ಅಲ್ ಅಜಬ್ ಸುಮ್ಮ ಅಲ್‌ಅಜವ್, (ಆಶ್ಚರ್ಯ ಸಖೇದಾಶ್ಚರ್ಯ) ಅದರ ಮೇಲೆ ದೌರ್ಜನ್ಯ ಹಾಗೂ ಭಂಡತನವೆಂದರೆ ಹಝ್ರತ್ ರಸೂಲುಲ್ಲಾಹ್(ಸ) ರವರಂತಹ ಪವಿತ್ರ ಪ್ರವಾದಿಯನ್ನು ನಿಂಧಿಸುವುದಾಗಿದೆ ಮತ್ತು ಪವಿತ್ರ ಖುರ್‌ಆನ್‌ನಂತಹ ಗ್ರಂಥದ ಮೇಲೆ ಆಕ್ರಮಣ ಮಾಡುವುದಾಗಿದೆ. ಅದನ್ನು ಅವರು ಮೊದಲು ತನ್ನ ಇಮಾಮ್ ಹಾಗೂ ಸರದಾರನೆಂದು ಒಪ್ಪಿಕೊಂಡಿದ್ದರು. ಅಕಟಾಕಟ! ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅವರು, ಏಕೆ ಇಸ್ಲಾಮ್ ಧರ್ಮವನ್ನು ತ್ಯಜಿಸಿ ಚರ್ಚ್‌ಗಳಲ್ಲಿ ಮತ್ತು ಪಾದರಿಯವರಲ್ಲಿ ಏಕೆ ಶರಣಾಗತಿಯಾಗಿದ್ದಾರೆ ಎಂಬ ಬಗ್ಗೆ ಪ್ರಖರವಾದ ಬೆಳಕನ್ನು ಚೆಲ್ಲಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಆ ರೋಚಕ ಹಾಗೂ ಜ್ಞಾನಭರಿತ ಅಧ್ಯಾಪನೆಗಳನ್ನು ಓದುಗರ ಸೇವೆಯಲ್ಲಿ ಪ್ರಸ್ತುತ ಪಡಿಸಬಯಸುತ್ತೇವೆ. ಆದರೆ ಅದಕ್ಕಿಂತ ಮುಂಚೆ ನಾವು ವಿವರಿಸ ಬಯಸುವುದೇನೆಂದರೆ ಒಬ್ಬ ಮುಸಲ್ಮಾನನು ಕ್ರೈಸ್ತನಾಗುವುದೆಂದರೆ ಹೇಗೆ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

"ಯಾವ ವ್ಯಕ್ತಿ ಮುಸಲ್ಮಾನನಾಗಿದ್ದು ಮತ್ತೆ ಕ್ರೈಸ್ತನಾಗಬಯಸಿದರೆ ಅವನ ಉದಾಹರಣೆಯು ಒಬ್ಬನು ತನ್ನ ತಾಯಿಯ ಉದರದಿಂದ ಜನಿಸಿ ಪ್ರೌಢನಾಗಿ ಮತ್ತು ತಾಯಿಯ ಉದರ ಸೇರಿಕೊಂಡ ಹಾಗೆ ಅಂದರೆ ಅದೇ ವೀರ್ಯಾಣುವಾಗಿ ಮರಳುವಂತಾಗುವುದು". (ಚಶ್ಮ ಮಸೀಹಿ, ರೂಹಾನಿ ಖಝಾಇನ್ ಸಂಪುಟ–20, ಪುಟ–344).

ಮತತ್ಯಾಗ ಮಾಡಲು ಕಾರಣ ಲೌಕಿಕ ವ್ಯಾಮೋಹ ಮತ್ತು ರುಚಿಕರ ಊಟದ ದಾಹ ಹಾಗೂ ಮಧ್ಯಪಾನ. ಮುಸ್ಲಿಮ್ ಮತಪಂಡಿತರು ಏಕೆ ಕ್ರೈಸ್ತಮತ ಸ್ವೀಕರಿಸುತ್ತಿದ್ದರು ಎಂಬ ವಿಷಯದ ಮೇಲೆ ಬೆಳಕು ಚೆಲ್ಲುತ್ತ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಇಸ್ಲಾಮ್ ಧರ್ಮ ಮತ್ತು ನಬಿ(ಸ) ರವರನ್ನು ಬಿಟ್ಟು ಕ್ರೈಸ್ತ ಮತ ಸೇರಿದ ಜನರು ನಾವು ಬ್ರಿಟಿಷ್ ಸರಕಾರದ ಸೇವೆಯನ್ನು ಮಾಡಿದ್ದು ಅಥವಾ ನಿಷ್ಠರಾಗಿದ್ದನ್ನು ಕಾಣಲಿಲ್ಲ. ಬದಲು ಅವರು ಹೌದಪ್ಪರಾಗಿ ಮತ್ತು ಕಪಟ ವಿಶ್ವಾಸಿಗರಾಗಿ ಜೀವನ ಸಾಗಿಸಿದ್ದನ್ನು ನೋಡಿದ್ದೇವೆ. ಕ್ರೈಸ್ತಮತಕ್ಕೆ ಹೆಚ್ಚಿನ ಜನರು ಸೇರಲು ಕಾರಣವೆಂದರೆ ಲೌಕಿಕ ಖಾಯಿಲೆಗಳ ಚಿಕಿತ್ಸೆ ಮತ್ತು ತನ್ನ ವ್ಯಾಮೊಹಗಳನ್ನು ತೀರಿಸಿಕೊಳ್ಳಲು ಮಾತ್ರ, ಅಂತೂ ಒಂದು ದಿನ ಅವರು ವಾಸ್ತವ ತಿಳಿದುಕೊಳ್ಳುವರು. ಭಿನ್ನ ಭಿನ್ನವಾಗುವರು ಮತ್ತು ಬಹುಬೇಗ ಮಾತೃಧರ್ಮಕ್ಕೆ ಮರಳಿ ಆಶ್ಚರ್ಯಪಡುವರು. ನಾವು ಎಷ್ಟೇ ವರ್ಷಗಳಿಂದ ನೋಡುತ್ತಿದ್ದೇವೆ. ಅವರು ತನ್ನ ಧಾರ್ಮಿಕ ವಚನ ಮತ್ತು ವಿಶ್ವಾಸ ಬಿಡಲು ಸಿದ್ಧರಿದ್ದಾರೆ. ಅವರಲ್ಲಿ ಸರಾಯಿ (ಮಧ್ಯ) ರುಚಿಕರ ಊಟದ ದಾಹಗಳನ್ನು ಬಿಟ್ಟರೆ ಯಾವುದೇ ಒಳ್ಳೆಯ ಗುಣ ಇಲ್ಲ. ಲೌಕಿಕ ದಾಹಗಳಿಗೆ ಕಾಗೆಯಂತೆ ಬಲಿಯಾಗಿದ್ದಾರೆ. ಅವರು ಲೌಕಿಕ ದಾಹಗಳಿಗೆ ಬಲಿಯಾಗಿ ಎಷ್ಟೊಂದು ದಾರಿ ತಪ್ಪಿದ್ದಾರೆ ಎಂಬ ವಿಷಯ ನಾವು ತಿಳಿದಿದ್ದೇವೆ. ಬಹುಬೇಗ ಆಂಗ್ಲರು ಅವರು ಎಷ್ಟು ನೀಚರು ಎಂಬುದನ್ನು ತಿಳಿದುಕೊಳ್ಳುವರು. ನಾವಂತೂ ಕಣ್ಣಾರೆ ನೋಡಿದ್ದೇವೆ. ಹೆಚ್ಚಿನವರು ಅದರಲ್ಲಿ ಕೇವಲ ಆತ್ಮಲೋಭೆ ಮತ್ತು ಸಾಲಭಾರ, ಹೊಟ್ಟೆಪಾಡು ಮತ್ತು ವ್ಯಭಿಚಾರ ಕಾರಣಗಳಿಂದಾಗಿ ಇಸ್ಲಾಮ್ ತ್ಯಜಿಸಿ ಕ್ರೈಸ್ತಮತಕ್ಕೆ ಸೇರಿದ್ದಾರೆ. ಮುಸ್ಲಿಮ್ ಜನರು ಅವರ ದಾಹ ಮತ್ತು ಲಾಲಸೆಗಳನ್ನು ತಿಳಿದವರಾಗಿದ್ದರು. ಆದುದರಿಂದ ಅವರನ್ನು ಲೆಕ್ಕಿಸಲಿಲ್ಲ. ಆದುದರಿಂದ ಆ ಜನರು ಪಾದರಿಗಳತ್ತ ಮುಖ ಮಾಡಿದರು. ಏಕೆಂದರೆ ಅಲ್ಲಿ ಅವರು ಲೌಕಿಕ ಮಿಂಚನ್ನು ಕಂಡರು. ಲೌಕಿಕ ಸೌಂದರ್ಯವನ್ನು ಮತ್ತು ಯಥೇಚ್ಛ ಸಂಪತ್ತಿಗೆ ಬಲಿಯಾದರು. ಕಾರಣ ತಮ್ಮ ನಿಜವಾದ ಉದ್ದೇಶವನ್ನು ಮರೆತುಬಿಟ್ಟರು. ಮೂಢರ ಹಾಗೆ ಅವರು ಚರ್ಚ್‌ಗಳನ್ನೇ ತನ್ನ ಮನೆಯೆಂದು ತಿಳಿದುಕೊಂಡರು. ಅವರ ಕಡೆ ವಾಲಿದರು. ನಮ್ಮ ದೇಶದ ಮುಸ್ಲಿಮರು ಇಂತಹ ಆಲಸಿ ಮತ್ತು ನಿರರ್ಥಕ ಜನರನ್ನು ಪೋಷಣೆ ಮಾಡಲು ಸಾಧ್ಯವಿರಲಿಲ್ಲ. ಅವರ ಊಟೋಪಚಾರವಾದ ಭಾರ ತಡೆದುಕೊಳ್ಳಲು ಸಾಧ್ಯವಿರಲಿಲ್ಲ. ಅವರಿಗೆ ಗರ್ಭಿಣಿ ಹೆಂಗಸಿನ ಹಾಗೆ ಅಶಕ್ತರು ಎಂದು ಭಾವಿಸಿ ಬಿಟ್ಟುಬಿಟ್ಟರು. ಏಕೆಂದರೆ ಮುಸಲ್ಮಾನರು ಓರ್ವ ದುರ್ಬಲ ಮತ್ತು ಅಶಕ್ತ ಸಮುದಾಯವಾಗಿದ್ದರು. ಅವರಲ್ಲಿ ಇವರಿಗೆ ನೀಡುವಷ್ಟು ಸಂಪತ್ತು ಇರಲಿಲ್ಲ. ಹೀಗಿರುವಾಗ ಅವರ ಹೊಟ್ಟೆಪಾಡು ನೋಡುವುದು ಹೇಗೆ. ಕ್ರೈಸ್ತರು ಈ ಅವಸ್ಥೆ ಕಂಡು ಅವರಿಗೆ ಗಾಳ ಹಾಕಲು ಮುಂದಾದರು. (ನೂರುಲ್–ಹಖ್, ರೂಹಾನಿ ಖಝಾಇನ್, ಸಂಪುಟ–8, ಪುಟ–45)

**ಮತತ್ಯಾಗ ಮಾಡಲು ಒಂದು ಕಾರಣ ಅತಿಮೂಢತನ, ಅಲ್ಪಜ್ಞಾನ ಮತ್ತು ಪಾಪಕೃತ್ಯಗಳಿಂದ ಅಭಿಲಾಷೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು.

"ಅವರಿಗೆ ಲೌಕಿಕ ಹಾಗೂ ಅಲೌಕಿಕ ಚಿಂತೆ ಎಂಬುದಿಲ್ಲ. ಅವರು ಇಸ್ಲಾಮ್ ಧರ್ಮ ತ್ಯಜಿಸಲು ದೊಡ್ಡ ಕಾರಣವೇನೆಂದರೆ ಅತಿ ಮೂಢತನ ಮತ್ತು ಅಲ್ಪ ಜ್ಞಾನ. ಅಲ್ಲಿಂದ ಹೆಚ್ಚಿನವರು ಮತತ್ಯಾಗ ಮಾಡಲು ಕಾರಣವೇನೆಂದರೆ ಹಸಿವಿನ ಜ್ವಾಲೆ ಭುಗಿಲೆದ್ದಿತು ಮತ್ತು ರಾತ್ರಿಯ ವೇಳೆ ಹೊಟ್ಟೆಗಾಗಿ ಪರಿತಪಿಸುವುದು, ಒಳ್ಳೊಳ್ಳೆಯ ಆಹಾರಕ್ಕಾಗಿ ಆಸೆ ಪಡುವುದು. ಮಧ್ಯ ಪ್ರೇಮ, ಹೆಣ್ಣಿನ ಆಸೆ, ಕಾಮ ಅಭಿಲಾಷೆ, ಸುಂದರ ಮಹಿಳೆಯರ ದರ್ಶನಕ್ಕಾಗಿ ಮೋಹಿಸುವುದು, ನೃತ್ಯ, ವೇಶ್ಯಾವಾಟಿಕೆ ಇಂತಹುದೇ ದುಷ್ಟ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಸ್ವಭಾವಗುಣಗಳಲ್ಲಿ ಹಝ್ರ‍ತ್ ಪೈಗಂಬರರೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆ ಹಝ್ರ‍ತ್ ಉಸ್ಮಾನ್‌ರಿಗೆ ಇತ್ತು (ಅಲ್‌ಹದೀಸ್)**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರ‍ತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಮಸ್ಜಿದ್ ನಬವಿಯ ವಿಸ್ತರಣೆಯ ಕುರಿತು ಸಂಕ್ಷಿಪ್ತ ಚರಿತ್ರೆ ಮತ್ತು ಆರಂಭದ ಸ್ಥಿತಿಗತಿಗಳು ಮತ್ತು ವಿಸ್ತರಣೆ ಬಗ್ಗೆ ವಿವರಣೆ**

**ಹಝ್ರ‍ತ್ ಆಯಿಶರಿಗೆ(ರ) ಹಝ್ರ‍ತ್ ಉಸ್ಮಾನ್‌ರ ಶಹಾದತಿನ ಸುದ್ದಿ ಮುಟ್ಟಿದಾಗ ಅವರು ಹೇಳಿದರು: ಆ ಜನರು ಹಝ್ರ‍ತ್ ಉಸ್ಮಾನ್‌ರನ್ನು ವಧಿಸಿರುವರು. ಅವರಾದರೋ ಅವರೆಲ್ಲರಿಗಿಂತಲೂ ಹೆಚ್ಚು ಸಂಬಂಧವನ್ನು ಜೋಡಿಸುವವರೂ ಅವರೆಲ್ಲರಿಗಿಂತಲೂ ಅಲ್ಲಾಹನ ಭಯಭಕ್ತಿಯನ್ನು ಹೊಂದಿರುವವರೂ ಆಗಿದ್ದರು.**

**"ನನ್ನ ಅಳಿಯನಾದ ಅಥವಾ ಯಾರ ಅಳಿಯನು ನಾನು ಆಗಿರುವೆನೋ ಅಂತಹ ಯಾವನೇ ವ್ಯಕ್ತಿಯನ್ನು ಬೆಂಕಿಯಲ್ಲಿ ಪ್ರವೇಶಿಸಬೇಡ" ಎಂದು ಅತ್ಯುನ್ನತನಾದ ಅಲ್ಲಾಹನೊಡನೆ ದುಆ ಮಾಡಿದ್ದಾಗಿ ಹಝ್ರ‍ತ್ ಪೈಗಂಬರ್(ಸ) ಹೇಳಿದರು.**

**ನಾಲ್ಕು ದಿವಂಗತರಾದ ಸನ್ಮಾನ್ಯ ಅಹ್ಮದ್ ಬಖ್ಷ್ ಸಾಹಿಬ್‌ರ ಮಗನಾದ ಮುಬಶ್ಶಿರ್ ಅಹ್ಮದ್ ಸಾಹಿಬ್, ಇಸ್ಲಾಮಾಬಾದ್ ಜಿಲ್ಲೆಯ ಮಾಜಿ ಅಮೀರ್ ಜಮಾಅತಾದ ಮುನೀರ್ ಅಹ್ಮದ್ ಫರಖ್ ಸಾಹಿಬ್, ರಾವಲ್ಪಿಂಡಿ ಜಿಲ್ಲೆಯ ಮಾಜಿ ಅಮೀರ್ ಆಗಿದ್ದ ರಿಟೈರ್ಡ್ ಬ್ರಗೇಡಿಯರ್ ಮುಹಮ್ಮದ್ ಲತೀಫ್ ಸಾಹಿಬ್ ಮತ್ತು ಕಿರ್ಗಿಸ್ತಾನದ ಅಹ್ಮದಿಯಾದ ಸನ್ಮಾನ್ಯ ಕೊನೊಕ್‌ಬೇಕ್ ಉಮರ್ ಬೇಕವ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‍ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–03–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‍ತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಅವರ ಶಹಾದತಿನ ನಂತರದ ಘಟನೆಗಳ ಕುರಿತು ಹಝ್ರ‍ತ್ ಮುಸ್ಲಿಹ್ ಮೌಊದ್(ರ) ಸಹ ಬರೆದಿದ್ದಾರೆ. ಶಹಾದತಿನ ನಂತರದ ದಿನಗಳ ಕುರಿತು ಸಂಕ್ಷಿಪ್ತವಾಗಿ ಹೀಗೆ ಬರೆದಿರುವರು: ಈಗ ಮದೀನ ಈ ವಿದ್ರೋಹಿಗಳ ನಿಯಂತ್ರಣದಲ್ಲಾಗಿತ್ತು. ಆ ದಿನಗಳಲ್ಲಿ ಈ ಜನರು ಮಾಡಿದ ಕೃತ್ಯಗಳು ಅತ್ಯಂತ ಆಶ್ಚರ್ಯಕರವಾದುದಾಗಿದೆ. ವಿದ್ರೋಹಿಗಳು ಹಝ್ರ‍ತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಿ ಆಗಿದ್ದರು. ಅನಂತರ ಅವರ ಮೃತದೇಹವನ್ನು ದಫನ್ ಮಾಡುವುದರ ಬಗ್ಗೆಯೂ ಆಕ್ಷೇಪವೆತ್ತಿದರು. ಮೂರು ದಿನಗಳ ತನಕ ಅವರ ಮಯ್ಯತ್ತನ್ನು ದಫನ್ ಮಾಡಲಾಗಲಿಲ್ಲ. ಕೊನೆಗೆ ಸಹಾಬರ ಒಂದು ಸಂಘ ಧೈರ್ಯಗೂಡಿಸಿಕೊಂಡು ರಾತ್ರಿ ಸಮಯದಲ್ಲಿ ಅವರ ಮೃತದೇಹವನ್ನು ದಫನ್ ಮಾಡಿದರು. ಈ ಸಂಘ ಹೋಗುತ್ತಿದ್ದ ಮಾರ್ಗದಲ್ಲೂ ಈ ವಿದ್ರೋಹಿಗಳು ತಡೆಗಳನ್ನು ಒಡ್ಡಿದ್ದರು. ಆದರೆ ಕೆಲವು ಜನರು ಶಕ್ತವಾಗಿ ಎದುರಿಸುವೆವು ಎಂದು ಬೆದರಿಕೆಯೊಡ್ಡಿದ್ದಾಗ ಅವರು ಸುಮ್ಮನಾದರು. (ಇಸ್ಲಾಮ್ ಮೇ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್, ಸಂಪುಟ–4, ಪುಟ–333)

ಹಝ್ರ‍ತ್ ಉಸ್ಮಾನ್‌ರ ಕುರಿತು ಹಝ್ರ‍ತ್ ಪೈಗಂಬರ್(ಸ) ಭವಿಷ್ಯನುಡಿದಿದ್ದರು. ಅದರ ಪ್ರಸ್ತಾಪ ಹೀಗೆ ಬರುತ್ತದೆ: ಹಝ್ರ‍ತ್ ಅಬೂಮೂಸಾ ಅಶ್‌ಅರಿ(ರ) ವರದಿ ಮಾಡುತ್ತಾರೆ: ಹಝ್ರ‍ತ್ ಪೈಗಂಬರ್(ಸ) ಒಂದು ತೋಟವನ್ನು ಪ್ರವೇಶಿಸಿದರು ಮತ್ತು ನನ್ನೊಡನೆ ತೋಟದ ಪ್ರವೇಶದ್ವಾರದಲ್ಲಿ ಕಾವಲು ನಿಲ್ಲಲು ಆಜ್ಞಾಪಿಸಿದರು. ಅಷ್ಟರಲ್ಲಿ ಒಬ್ಬ ವ್ಯಕ್ತಿ ಬಂದು ಒಳಗೆ ಪ್ರವೇಶಿಸಲು ಅನುಮತಿ ಕೇಳಿದರು. ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹಝ್ರ‍ತ್ ಪೈಗಂಬರ್(ಸ) ಹೇಳಿದರು. ಅವರು ಹಝ್ರ‍ತ್ ಅಬೂಬಕರ್(ರ) ಆಗಿದ್ದರು ಎಂದು ನಾನು ನೋಡಿದೆ. ಅನಂತರ ಮತ್ತೊಬ್ಬ ವ್ಯಕ್ತಿ ಬಂದು ಅನುಮತಿ ಕೇಳಿದರು. ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು ಎಂದು ಹಝ್ರ‍ತ್ ಪೈಗಂಬರ್(ಸ) ಹೇಳಿದರು. ಅವರು ಹಝ್ರ‍ತ್ ಉಮರ್(ರ) ಆಗಿದ್ದರು ಎಂದು ನಾನು ನೋಡಿದೆ. ಅನಂತರ ಮತ್ತೊಬ್ಬ ವ್ಯಕ್ತಿ ಬಂದು ಅನುಮತಿ ಕೇಳಿದರು. ಆಗ ಹಝ್ರ‍ತ್ ಪೈಗಂಬರ್(ಸ) ಸ್ವಲ್ಪ ಸಮಯ ಮೌನವಾಗಿ ಇದ್ದರು ಅನಂತರ ಹೇಳಿದರು: ಅವರಿಗೆ ಒಳಗೆ ಬರಲು ಅನುಮತಿ ಕೊಡು ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು. ಆದರೆ ಒಂದು ದೊಡ್ಡ ವಿಪತ್ತು ಅವರಿಗೆ ತಲುಪುವುದು. ನಾನು ನೋಡಿದಾಗ, ಅವರು ಹಝ್ರ‍ತ್ ಉಸ್ಮಾನ್ ಬಿನ್ ಅಫ್ಫಾನ್(ರ) ಆಗಿದ್ದರು. (ಸಹೀಹ್ ಅಲ್‌ಬುಖಾರಿ ಕಿತಾಬ್ ಫಝಾಎಲ್ ಅಸ್‌ಹಾಬುನ್ನಬಿ(ಸ), ಹದೀಸ್–3695)

ಹಝ್ರ‍ತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರ‍ತ್ ಪೈಗಂಬರ್(ಸ) ಉಹದ್ ಪರ್ವತವನ್ನೇರಿದರು. ಅವರೊಂದಿಗೆ ಹಝ್ರ‍ತ್ ಅಬೂಬಕರ್(ರ), ಹಝ್ರ‍ತ್ ಉಮರ್(ರ) ಮತ್ತು ಹಝ್ರ‍ತ್ ಉಸ್ಮಾನ್(ರ) ಇದ್ದರು. ಉಹದ್ ಪರ್ವತ ಕಂಪಿಸಲು ತೊಡಗಿತು. ಆಗ ಹಝ್ರ‍ತ್ ಪೈಗಂಬರ್(ಸ) ಹೇಳಿದರು: ಉಹದ್, ಅಲುಗಾಡದಿರು. ನಿನ್ನ ಮೇಲೆ ಒಬ್ಬ ಪ್ರವಾದಿ, ಒಬ್ಬ ಸಿದ್ದೀಖ್ ಮತ್ತು ಇಬ್ಬರು ಶಹೀದರು ಇದ್ದಾರೆ. ವರದಿಗಾರ ಹೇಳುತ್ತಾರೆ: ಅವರು ತನ್ನ ಕಾಲನ್ನು ಸಹ ಪರ್ವತದ ಮೇಲೆ ಹೊಡೆದರು ಎಂದು ನನಗೆ ತೋರುತ್ತದೆ. (ಸಹೀಹ್ ಬುಖಾರಿ ಕಿತಾಬ್ ಅಸ್ಹಾಬುನ್ನಬಿ(ಸ) ಹದೀಸ್–3699)

ಹಝ್ರ‍ತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರ‍ತ್ ಪೈಗಂಬರ್(ಸ) ಒಂದು ಪಿತೂರಿಯ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ಈ ವ್ಯಕ್ತಿ ಆ ಪಿತೂರಿಯಲ್ಲಿ ದೌರ್ಜನ್ಯ ಪೀಡಿತರಾದ ಸ್ಥಿತಿಯಲ್ಲಿ ವಧಿಸಲ್ಪಡುವರು. ಇದನ್ನು ಅವರು ಹಝ್ರ‍ತ್ ಉಸ್ಮಾನ್‌ರ(ರ) ಕಡೆಗೆ ಬೊಟ್ಟುಮಾಡುತ್ತಾ ಹೇಳಿದ್ದರು. (ಸುನನ್ ಅತ್ತಿರ್‌ಮಿಧಿ, ಅಬ್ವಾಬುಲ್ ಮನಾಖಿಬ್, ಹದೀಸ್–3708)

ಹಝ್ರ‍ತ್ ಉಸ್ಮಾನ್(ರ) ಬಿಟ್ಟುಹೋದ ಆಸ್ತಿಯು ಬಗ್ಗೆ ಉಬೈದುಲ್ಲಾಹ್ ಬಿನ್ ಅಬ್ದುಲ್ಲಾಹ್ ಬಿನ್ ಉತ್‌ಬ ವರದಿ ಮಾಡುತ್ತಾರೆ: ಹಝ್ರ‍ತ್ ಉಸ್ಮಾನ್(ರ) ಶಹೀದ್ ಮಾಡಲಾದ ದಿನದಂದು ಅವರ ಖಜಾಂಚಿಯ ಬಳಿ ಮೂರು ಕೋಟಿ ಐದು ಲಕ್ಷ ದಿರ್‌ಹಮ್ ಮತ್ತು ಒಂದುವರೆ ಲಕ್ಷ ದೀನಾರ್ ಇತ್ತು. ಅವುಗಳನ್ನೆಲ್ಲ ಲೂಟಿ ಮಾಡಲಾಯಿತು. ಅದೇ ರೀತಿಯಲ್ಲಿ ಅವರು ರಬ್‌ಝ ಎಂಬ ಸ್ಥಳದಲ್ಲಿ ಒಂದು ಸಾವಿರ ಒಂಟೆಗಳನ್ನು ಬಿಟ್ಟುಹೋಗಿದ್ದರು. ರಬ್‌ಝ ಎಂಬುದು ಹಿಜಾಝ್‌ನ ರಸ್ತೆಯಲ್ಲಿ ಮದೀನದಿಂದ ಮೂರು ದಿನಗಳ ಯಾತ್ರೆಯ ದೂರದಲ್ಲಿರುವ ಗ್ರಾಮವಾಗಿದೆ. ಅದೇ ರೀತಿಯಲ್ಲಿ ಬ್ರಾದೇಸ್, ಖೈಬರ್, ಮತ್ತು ವಾದಿಲ್‌ಖುರಾದಲ್ಲಿ 2 ಲಕ್ಷಗಳಷ್ಟು ದೀನಾರ್ ಸದಖ ಆಗಿ ಬಿಟ್ಟುಹೋಗಿದ್ದರು. ಅದರಿಂದಲೇ ಅವರು ದಾನ ಮಾಡುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–42, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996) (ಫರ್‌ಹಂಗ್ ಸೀರತ್ ಪುಟ–130, ಝೂವಾರಿ ಅಕಾಡಮಿ ಪಬ್ಲಿಕೇಶನ್ ಕರಾಚಿ 2003)

ಮೊದಲು ಹೀಗೆಯೂ ಪ್ರಸ್ತಾಪಿಸಲಾಗಿತ್ತು: ಹಝ್ರ‍ತ್ ಉಸ್ಮಾನ್(ರ) ಹೇಳಿದ್ದರು: ನಾನು ಶ್ರೀಮಂತ ವ್ಯಕ್ತಿಯಾಗಿದ್ದೆ. ಈಗ ನನ್ನ ಬಳಿ ಕೇವಲ 2 ಒಂಟೆಗಳು ಹಜ್ಜ್‌ಗಾಗಿ ನಾನು ಇರಿಸಿದ್ದೇನೆ. (ಇಸ್ಲಾಮ್ ಮೇ

ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–294)

ವರದಿಗಾರ ಹಝ್ರತ್ ಉಸ್ಮಾನ್(ರ) ಬಿಟ್ಟುಹೋಗಿದ್ದಾಗಿ ಹೇಳುತ್ತಿರುವ ಆಸ್ತಿಗಳು ಸರ್ಕಾರಿ ಖಜಾನೆಯದ್ದಾಗಿರಬೇಕು. ವರದಿಗಾರ ಅದನ್ನು ಹಝ್ರತ್ ಉಸ್ಮಾನ್‌ರದೆಂದು ಭಾವಿಸಿ ಹೇಳುತ್ತಿರಬಹುದು ಅಥವಾ ಅದು ಹಝ್ರತ್ ಉಸ್ಮಾನ್‌ರ ಸ್ವಂತವೂ ಆಗಿರಬಹುದಾದರೂ ಅದನ್ನು ಅವರು ಆಗ ಸ್ವಂತಕ್ಕಾಗಿ ಖರ್ಚು ಮಾಡುತ್ತಿರಲಿಲ್ಲ. ಬದಲಿಗೆ ಅದನ್ನು ಕೂಡ ದಾನಧರ್ಮಕ್ಕಾಗಿ ಮತ್ತು ಸಾಮೂಹಿಕ ಆವಶ್ಯಕತೆಗಾಗಿ ಖರ್ಚು ಮಾಡುತ್ತಿದ್ದರು. ಹೇಗಿದ್ದರೂ ನಾನು ಪ್ರಸ್ತಾಪಿಸಿದ್ದು ಒಂದು ವರದಿಯಾಗಿದೆ. ಇದಕ್ಕಿಂತ ಮುಂಚೆ ಹಝ್ರತ್ ಉಸ್ಮಾನ್‌ರಿಗೆ ಸಂಬಂಧಿಸಿ ಅವರು ಖಜಾನೆಯನ್ನು ಸಂರಕ್ಷಿಸಲು ಖಜಾಂಚಿಗಳನ್ನು ನಿಶ್ಚಯಿಸಿದ್ದರು ಎಂಬ ಒಂದು ವರದಿಯನ್ನು ಹೇಳಿದ್ದೆ. ಇದರಿಂದಲೂ ಅದು ಸಾಮುದಾಯಿಕ ಖಜಾನೆಯಾಗಿತ್ತು ಎಂದು ಸ್ಪಷ್ಟವಾಗುತ್ತದೆ. ಅದರ ಸಂರಕ್ಷಣೆಗಾಗಿ ಹಝ್ರತ್ ಉಸ್ಮಾನ್(ರ) ಖಜಾಂಚಿಗಳನ್ನು ನಿಶ್ಚಯಿಸಿದ್ದರು. (ಇಸ್ಲಾಮ್ ಮೇ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–329)

ಹಝ್ರತ್ ಉಸ್ಮಾನ್‌ರ ಶಹಾದತಿನ ಘಟನೆಗಳ ಬಗ್ಗೆ ಸಹಾಬರು ಹೀಗೆ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ(ರ) ಬಗ್ಗೆ ಏನಾದರೂ ಹೇಳಿಕೊಡಲಿಕ್ಕಾಗಿ ಹಝ್ರತ್ ಅಲಿ ರಝಿಯಲಾಹು ಅನ್‌ಹುರೊಡನೆ ಕೇಳಲಾಯಿತು. ಅವರು ಹೇಳಿದರು: ಹಝ್ರತ್ ಉಸ್ಮಾನ್(ರ) ಎಂತಹ ವ್ಯಕ್ತಿಯಾಗಿದ್ದರು ಎಂದರೆ, ಅವರು ಅಲ್ಲಾಹನ ಸನ್ನಿಧಿಯಲ್ಲೂ ಧುನ್ನೂರೈನ್ ಆಗಿದ್ದರು. ಎಂದರೆ, ಎರಡು ಪ್ರಕಾಶಗಳನ್ನು ಹೊಂದಿರುವ ವ್ಯಕ್ತಿ. ಅವರು ನಮ್ಮಲ್ಲಿ ಅತ್ಯಂತ ಹೆಚ್ಚು ಸಂಬಂಧವನ್ನು ಜೋಡಿಸುವವರಾಗಿದ್ದರು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ ಭಾಗ–4, ಪುಟ–378, ದಾರುಲ್ ಉತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಅಲಿ(ರ) ಹೇಳಿದರು: ಹಝ್ರತ್ ಉಸ್ಮಾನ್(ರ) ನಮ್ಮಲ್ಲಿ ಅತ್ಯಂತ ಹೆಚ್ಚು ಸಂಬಂಧವನ್ನು ಜೋಡಿಸುವವರಾಗಿದ್ದರು. ಹಝ್ರತ್ ಆಯಿಶರಿಗೆ(ರ) ಹಝ್ರತ್ ಉಸ್ಮಾನ್‌ರ ಶಹಾದತಿನ ಸುದ್ದಿ ಮುಟ್ಟಿದಾಗ ಅವರು ಹೇಳಿದರು: ಆ ಜನರು ಹಝ್ರತ್ ಉಸ್ಮಾನ್‌ರನ್ನು ವಧಿಸಿರುವರು. ಅವರಾದರೋ ಅವರೆಲ್ಲರಿಗಿಂತಲೂ ಹೆಚ್ಚು ಸಂಬಂಧವನ್ನು ಜೋಡಿಸುವವರೂ ಅವರೆಲ್ಲರಿಗಿಂತಲೂ ಅಲ್ಲಾಹನ ಭಯಭಕ್ತಿಯನ್ನು ಹೊಂದಿರುವವರೂ ಆಗಿದ್ದರು.
(ಅಲ್‌ಅಸಾಬ ಫೀ ತಮೀಝೀಸ್ಸಹಾಬ ಭಾಗ–4, ಪುಟ–378, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಪೈಗಂಬರ್(ಸ) ತಮ್ಮ ಅಳಿಯಂದಿರ ಪರವಾಗಿ ಮಾಡಿದ್ದ ದುಆ ಬಗ್ಗೆ ಹೀಗೆ ವರದಿ ಸಿಗುತ್ತದೆ. ಅಲ್‌ಇಸ್ತೀಆಬ್‌ನಲ್ಲಿ ಹೀಗೆ ಬರೆಯಲಾಗಿದೆ – "ನನ್ನ ಅಳಿಯನಾದ ಅಥವಾ ಯಾರ ಅಳಿಯನು ನಾನು ಆಗಿರುವೆನೋ ಅಂತಹ ಯಾವನೇ ವ್ಯಕ್ತಿಯನ್ನು ಬೆಂಕಿಯಲ್ಲಿ ಪ್ರವೇಶಿಸಬೇಡ" ಎಂದು ಅತ್ಯುನ್ನತನಾದ ಅಲ್ಲಾಹನೊಡನೆ ದುಆ ಮಾಡಿದ್ದಾಗಿ ಹಝ್ರತ್ ಪೈಗಂಬರ್(ಸ) ಹೇಳಿದರು. (ಅಲ್‌ಇಸ್ತೀಆಬ್ ಫಿ ಮಾರಿಫತಿಸ್ಸಹಾಬ ಭಾಗ–3, ಪುಟ–156, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಉಸ್ಮಾನ್‌ರ ವಸ್ತ್ರ ಮತ್ತು ದೇಹರೂಪದ ಬಗ್ಗೆ ಹೀಗೆ ಬಂದಿದೆ. ಮಹ್ಮೂದ್ ಬಿನ್ ಲಬೀದ್ ಹೇಳುತ್ತಾರೆ: ನಾನು ಹಝ್ರತ್ ಉಸ್ಮಾನ್‌ರನ್ನು ಒಂದು ಹೇಸರಗತ್ತೆಯ ಮೇಲೆ ಸವಾರರಾಗಿ ಇರುವುದನ್ನು ಕಂಡೆನು. ಅವರ ದೇಹದಲ್ಲಿ ಎರಡು ಚಾದರಗಳು ಇದ್ದುವು.

ಹಕಮ್ ಬಿನ್ ಸಲದ್ ವರದಿ ಮಾಡುತ್ತಾರೆ: ನನ್ನ ತಂದೆ ನನ್ನೊಡನೆ ಹೇಳಿದರು: ಅವರು ಹಝ್ರತ್ ಉಸ್ಮಾನ್‌ರನ್ನು ಭಾಷಣ ಮಾಡುತ್ತಿರುವುದಾಗಿ ಕಂಡರು. ಆಗ ಅವರ ದೇಹದಲ್ಲಿ ಕಪ್ಪು ಬಣ್ಣದ ಚಾದರವಿತ್ತು. ಅವರು ಮೆಹಂದಿಯನ್ನು ಕೂದಲುಗಳಲ್ಲಿ ಹಚ್ಚಿದ್ದರು. ಸಲೀಂ ಅಬೂ ಆಮಿರ್ ವರದಿ ಮಾಡುತ್ತಾರೆ: ಅವರು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರ ದೇಹದಲ್ಲಿ ಒಂದು ಯಮನೀ ಚಾದರವನ್ನು ನೋಡಿದರು. ಅದರ ಬೆಲೆ ನೂರು ದಿರ್ಹಂ ಆಗಿತ್ತು. ಮುಹಮ್ಮದ್ ಬಿನ್ ಉಮರ್ ಹೇಳುತ್ತಾರೆ: ನಾನು ಅಮ್ರ್ ಬಿನ್ ಅಬ್ದುಲ್ಲಾಹ್, ಉರ್‌ವ ಬಿನ್ ಖಾಲಿದ್ ಮತ್ತು ಅಬ್ದುರ್ರಹ್ಮಾನ್ ಬಿನ್ ಅಬೂಝುನಾದ್‌ರೊಡನೆ ಹಝ್ರತ್ ಉಸ್ಮಾನ್‌ರ ರೂಪ ಇತ್ಯಾದಿಗಳ ಬಗ್ಗೆ ಕೇಳಿದೆ. ಅವರೆಲ್ಲರೂ ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಹೀಗೆ ಹೇಳಿದರು: ಅವರ ಶರೀರ ಗಿಡ್ಡವೂ ಆಗಿರಲಿಲ್ಲ, ಬಹಳ ಹೆಚ್ಚು ಉದ್ದವೂ ಆಗಿರಲಿಲ್ಲ. ಅವರ ಮುಖ ಸುಂದರ, ಚರ್ಮ ಮೃದು, ಗಡ್ಡ ದಟ್ಟ ಮತ್ತು ಉದ್ದವಾಗಿತ್ತು, ಚರ್ಮ ಗೋದಿ ಬಣ್ಣದ್ದಾಗಿತ್ತು, ಶಕ್ತವಾದ ಕೀಲುಗಳನ್ನು ಹೊಂದಿದ್ದರು, ಅಗಲವಾದ ಭುಜಗಳು, ದಟ್ಟವಾದ ತಲೆಗೂದಲುಗಳನ್ನು ಹೊಂದಿದ್ದರು. ಅವರು ಗಡ್ಡಕ್ಕೆ ಹಳದಿ ಬಣ್ಣವನ್ನು ಹಚ್ಚುತ್ತಿದ್ದರು. ವಾಖಿದ್ ಬಿನ್ ಅಬೂ ಯಾಸಿರ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ತನ್ನ ಹಲ್ಲುಗಳನ್ನು ಚಿನ್ನದ ನೂಲಿನಿಂದ ಕಟ್ಟಿದ್ದರು. ಮೂಸಾ ಬಿನ್ ತಲ್‌ಹ ಹೇಳುತ್ತಾರೆ: ನಾನು ಹಝ್ರತ್ ಉಸ್ಮಾನ್‌ರನ್ನು ನೋಡಿದೆ. ಅವರು ಜುಮಾ ದಿವಸ ಹೊರಗೆ ಬರುವಾಗ, ಅವರ ದೇಹದ ಮೇಲೆ ಎರಡು ಚಾದರಗಳು ಇರುತ್ತಿದ್ದುವು. ಅನಂತರ ಅವರು ಪ್ರವಚನ ಪೀಠವನ್ನು ಏರುತ್ತಿದ್ದರು. ಮುಅಧ್ದಿನ್ ಅಧಾನ್ ನೀಡುತ್ತಿದ್ದರು. ಮುಅಧ್ದಿನ್ ಮೌನವಾದ ನಂತರ ಡೊಂಕಾದ ಒಂದು ಕೋಲಿನ ನೆರವಿನೊಂದಿಗೆ ಹಝ್ರತ್ ಉಸ್ಮಾನ್(ರ) ನಿಲ್ಲುತ್ತಿದ್ದರು. ಕೋಲನ್ನು ಕೈಯಿಂದ ಹಿಡಿದುಕೊಂಡು ಅವರು ಖುತ್ಬ ನೀಡುತ್ತಿದ್ದರು. ಅನಂತರ ಮಿಂಬರ್‌ನಿಂದ ಇಳಿಯುವಾಗ ಮುಅಧ್ದಿನ್ ಇಖಾಮತ್ ನೀಡುತ್ತಿದ್ದರು. ಹಸನ್ ವರದಿ ಮಾಡುತ್ತಾರೆ: ನಾನು ಹಝ್ರತ್ ಉಸ್ಮಾನ್‌ರನ್ನು ಮಸೀದಿಯಲ್ಲಿ ತನ್ನ ಚಾದರವನ್ನು ತಲೆಯಡಿಯಲ್ಲಿರಿಸಿ ನಿದ್ದೆ ಮಾಡುವುದನ್ನು ನೋಡಿದ್ದೇನೆ.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–32–34, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಮೂಸಾ ಬಿನ್ ತಲ್‌ಹ ವರದಿ ಮಾಡುತ್ತಾರೆ: ಜುಮಾ ದಿವಸ ಹಝ್ರತ್ ಉಸ್ಮಾನ್(ರ) ಒಂದು ಉರುಗೋಲನ್ನು ಹಿಡಿದಿದ್ದರು. ಹಝ್ರತ್ ಉಸ್ಮಾನ್(ರ) ಎಲ್ಲ ಜನರಿಗಿಂತ ಹೆಚ್ಚು ಸುಂದರವಾಗಿದ್ದರು. ಅವರ ದೇಹದಲ್ಲಿ ಎರಡು ಹಳದಿ ಬಣ್ಣದ ಬಟ್ಟೆಗಳು ಇರುತ್ತಿದ್ದವು. ಒಂದು ಚಾದರ ಮತ್ತು ಒಂದು ಲುಂಗಿ. ಅನಂತರ ಅವರು ಮಿಂಬರಿಗೆ ಬರುತ್ತಿದ್ದರು ಮತ್ತು ಅದರಲ್ಲಿ ಕುಳಿತುಕೊಳ್ಳುತ್ತಿದ್ದರು. (ಮಜ್ಮ ಅಝ್ಝವಾಎದ್ ಡ ಮಂಬಅ ಅಲ್‌ಫವಾಎದ್, ಅಲ್ಲಝಾ ಅತ್ತಾಸಅ, ಪುಟ–57, ಕಿತಾಬ್ ಅಲ್‌ಮನಾಖಿಬ್, ಹದೀಸ್–14493, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಪೈಗಂಬರರ(ಸ) ಒಂದು ಉಂಗುರವಿತ್ತು. ಅದರಲ್ಲಿ ಮುಹಮ್ಮದು ರಸೂಲುಲ್ಲಾಹ್ ಎಂದು ಕೆತ್ತಲಾಗಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ಉಪಯೋಗಿಸುತ್ತಿದ್ದರು. ಇದರ ಬಗ್ಗೆ ವರದಿಯಿದೆ. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ರೋಮಿನ ರಾಜನ ಕಡೆಗೆ ಒಂದು ಪತ್ರವನ್ನು ಬರೆಯಲು ಉದ್ದೇಶಿಸಿದ್ದರು. ಈ ಪತ್ರದಲ್ಲಿ ಮೊಹರು ಇಲ್ಲದಿದ್ದರೆ ನಿಮ್ಮ ಪತ್ರವನ್ನು ರಾಜನು ಓದಲಿಕ್ಕಿಲ್ಲವೆಂದು ಹಝ್ರತ್ ಪೈಗಂಬರರೊಡನೆ ಹೇಳಲಾಯಿತು. ಆಗ ಹಝ್ರತ್ ಪೈಗಂಬರ್(ಸ) ಬೆಳ್ಳಿಯ ಒಂದು ಉಂಗುರವನ್ನು ಮಾಡಿಸಿದರು. ಅದರಲ್ಲಿ ಮುಹಮ್ಮದ್ ರಸೂಲುಲ್ಲಾಹ್ ಎಂದು ಕೆತ್ತಲಾಗಿತ್ತು. ವರದಿಗಾರ ಹೇಳುತ್ತಾರೆ: ನಾನು ಈಗಲೂ ಹಝ್ರತ್ ಪೈಗಂಬರರ(ಸ) ಉಂಗುರದ ಹೊಳಪನ್ನು ನೋಡುತ್ತಿದ್ದೇನೆ. (ಸಹೀಹ್ ಬುಖಾರಿ ಹದೀಸ್–5875)

ಹಝ್ರತ್ ಅನಸ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಕೈಯಲ್ಲಿ ಆ ಉಂಗುರವಿತ್ತು. ಹಝ್ರತ್ ಪೈಗಂಬರರ(ಸ) ನಂತರ ಅದು ಹಝ್ರತ್ ಅಬೂಬಕರರ ಕೈಯಲ್ಲಿ ಇತ್ತು. ಹಝ್ರತ್ ಅಬೂಬಕರರ ನಂತರ ಹಝ್ರತ್ ಉಮರರ ಕೈಯಲ್ಲಿತ್ತು. ಅನಂತರ ಹಝ್ರತ್ ಉಸ್ಮಾನ್‌ರ ಕಾಲಘಟ್ಟ ಬಂತು. ಒಂದು ಬಾರಿ ಅವರು ಉರೈಸ್ ಎಂಬ ಹೆಸರಿನ ಬಾವಿಯ ಸಮೀಪ ಕುಳಿತಿದ್ದರು. ವರದಿಗಾರ ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಆ ಉಂಗುರವನ್ನು ತೆಗೆದರು. ಕೈಯಲ್ಲಿ ಅದನ್ನು ತಿರುಗಿಸುತ್ತಿದ್ದರು. ಆಗ ಅದು ಬಿದ್ದುಹೋಯಿತು. ನಾವು ಹಝ್ರತ್ ಉಸ್ಮಾನ್‌ರೊಂದಿಗೆ ಮೂರು ದಿನಗಳ ತನಕ ಅದನ್ನು ಹುಡುಕಿದೆವು. ಬಾವಿಯ ನೀರನ್ನೆಲ್ಲ ಹೊರಗೆ ಹಾಕಿದೆವು. ಆದರೆ ಆ ಉಂಗುರ ಪತ್ತೆಯಾಗಲಿಲ್ಲ.

ಆ ಉಂಗುರ ಕಳೆದುಹೋದ ನಂತರ ಹಝ್ರತ್ ಉಸ್ಮಾನ್(ರ) ಅದನ್ನು ಕಂಡುಹಿಡಿದು ಕೊಡುವವರಿಗೆ ದೊಡ್ಡ ಸಂಖ್ಯೆಯ ಹಣವನ್ನು ಕೊಡುವುದಾಗಿ ಘೋಷಿಸಿದರು. ಆ ಉಂಗುರ ಕಾಣೆಯಾದ ಕಾರಣದಿಂದ ಹಝ್ರತ್ ಉಸ್ಮಾನ್‌ರಿಗೆ ತುಂಬಾ ದುಃಖವಿತ್ತು. ಆ ಉಂಗುರ ಸಿಗದೇ ಹೋದಾಗ ಹಝ್ರತ್ ಉಸ್ಮಾನ್(ರ) ಅಂತಹದ್ದೇ ಒಂದು ಬೆಳ್ಳಿಯ ಉಂಗುರವನ್ನು ತಯಾರಿಸಲು ಆದೇಶಿಸಿದರು. ಹೀಗೆ ಅಂತಹದ್ದೇ ಒಂದು ಉಂಗುರವನ್ನು ತಯಾರಿಸಲಾಯಿತು. ಅದರಲ್ಲಿ ಮುಹಮ್ಮದು ರಸೂಲುಲ್ಲಾಹ್ ಎಂದು ಕೆತ್ತಲಾಗಿತ್ತು. ಆ ಉಂಗುರವನ್ನು ಅವರು ತನ್ನ ಮರಣದ ತನಕ ಬೆರಳಲ್ಲಿ ಹಾಕುತ್ತಿದ್ದರು. ಅವರ ಶಹಾದತಿನ ವೇಳೆ ಆ ಉಂಗುರವನ್ನು ಅಪರಿಚಿತನಾದ ಯಾರೋ ತೆಗೆದುಕೊಂಡು ಹೋದರು. (ಸಹೀಹ್ ಬುಖಾರಿ ಕಿತಾಬುಲ್ಲಿಬಾಸ್, ಹದೀಸ್–5879) (ತಾರೀಖ್ ಅತ್ತಿಬರಿ ಸಂಪುಟ–5, ಪುಟ–111–112, ದಾರುಲ್ ಫಿಕರ್ ಬೈರೂತ್ 2002)

ಸ್ವರ್ಗದ ಸುವಾರ್ತೆ ಲಭಿಸಿದ್ದ ಹತ್ತು ವಿಶಿಷ್ಟ ವ್ಯಕ್ತಿಗಳಲ್ಲೂ ಅವರು ಸೇರಿದ್ದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಖ್‌ನಸ್ ವರದಿ ಮಾಡುತ್ತಾರೆ: ಅವರು ಮಸೀದಿಯಲ್ಲಿದ್ದರು. ಒಬ್ಬ ವ್ಯಕ್ತಿ ಹಝ್ರತ್ ಅಲಿಯ ಬಗ್ಗೆ ಅಪಮರ್ಯಾದೆಯಿಂದ ಪ್ರಸ್ತಾಪಿಸಿದರು. ಆಗ ಹಝ್ರತ್ ಸಈದ್ ಬಿನ್ ಝೈದ್ ಎದ್ದುನಿಂತು ಹೇಳಿದರು: ನಾನು ಹಝ್ರತ್ ಪೈಗಂಬರರ(ಸ)

ಕುರಿತು ಸಾಕ್ಷಿವಹಿಸುತ್ತೇನೆ. ಖಂಡಿತವಾಗಿಯೂ ಅವರು ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಹತ್ತು ವ್ಯಕ್ತಿಗಳು ಸ್ವರ್ಗದಲ್ಲಿ ಹೋಗುವರು. ಹಝ್ರತ್ ಪೈಗಂಬರ್(ಸ) ಸ್ವರ್ಗದಲ್ಲಿರುವರು, ಅಬೂಬಕರ್ ಸ್ವರ್ಗದಲ್ಲಿರುವರು, ಉಮರ್ ಸ್ವರ್ಗದಲ್ಲಿರುವರು, ಉಸ್ಮಾನ್ ಸ್ವರ್ಗದಲ್ಲಿ ಇರುವರು, ಅಲಿ ಸ್ವರ್ಗದಲ್ಲಿರುವರು, ತಲ್ಹ ಸ್ವರ್ಗದಲ್ಲಿರುವರು, ಅಬ್ದುರ್ರಹ್ಮಾನ್ ಬಿನ್ ಔಫ್ ಸ್ವರ್ಗದಲ್ಲಿರುವರು, ಝುಬೇರ್ ಬಿನ್ ಅವಾಂ ಸ್ವರ್ಗದಲ್ಲಿರುವರು, ಸಅದ್ ಬಿನ್ ಮಾಲಿಕ್ ಸ್ವರ್ಗದಲ್ಲಿರುವರು, ನಾನು ಬೇಕಾದರೆ, ಹತ್ತನೇ ವ್ಯಕ್ತಿಯ ಹೆಸರು ಸಹ ಹೇಳಬಲ್ಲೆನು. ವರದಿಗಾರ ಹೇಳುತ್ತಾರೆ: ಹತ್ತನೇ ವ್ಯಕ್ತಿ ಯಾರೆಂದು ಜನರು ಕೇಳಿದರು. ಹಝ್ರತ್ ಸಅದ್ ಬಿನ್ ಝೈದ್(ರ) ಸ್ವಲ್ಪ ಸಮಯ ಸುಮ್ಮನಿದ್ದರು. ಹತ್ತನೇ ವ್ಯಕ್ತಿ ಯಾರೆಂದು ಜನರು ಪುನಃ ಕೇಳಿದರು. ಆಗ ಅವರು ಹೇಳಿದರು: ಸಅದ್ ಬಿನ್ ಝೈದ್, ಎಂದರೆ ನಾನೇ. ಮೊದಲು ಸಹ ಇವರ ಸಂಬಂಧಿಸಿ ಹೇಳಿದಾಗ ಈ ವರದಿಯನ್ನು ಪ್ರಸ್ತಾಪಿಸಿದ್ದೆ.

ಸ್ವರ್ಗದಲ್ಲಿ ಹಝ್ರತ್ ಉಸ್ಮಾನ್‌ರೊಂದಿಗೆ ಹಝ್ರತ್ ಪೈಗಂಬರರ(ಸ) ಸ್ನೇಹ ಸಂಬಂಧದ ಬಗ್ಗೆ ವರದಿಯಾಗಿದೆ. ಹಝ್ರತ್ ತಲ್ಹ ಬಿನ್ ಉಬೈದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ಪ್ರವಾದಿಗೆ ಒಬ್ಬ ಸ್ನೇಹಿತನಿರುತ್ತಾನೆ. (ಸುನನ್ ಅತ್ತಿರ್ಮಿಝಿ, ಅಬ್ವಾಬುಲ್ ಮನಾಖಿಬ್, ಹದೀಸ್–3698)

ಸ್ವರ್ಗದಲ್ಲಿ ನನ್ನ ಸ್ನೇಹಿತ ಉಸ್ಮಾನ್ ಆಗಿರುವರು. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಒಂದು ಸಲ ನಾವು ಹಝ್ರತ್ ಪೈಗಂಬರರ(ಸ) ಜೊತೆಗೆ ಒಂದು ಮನೆಯಲ್ಲಿ ಮುಹಾಜಿರರ ಒಂದು ಸಂಘದೊಂದಿಗೆ ಇದ್ದೆವು. ಅವರಲ್ಲಿ ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್ಹ, ಝುಬೇರ್, ಅಬ್ದುರ್ರಹ್ಮಾನ್ ಬಿನ್ ಔಫ್ ಮತ್ತು ಸಅದ್ ಬಿನ್ ವಖಾಸ್ ಇದ್ದರು. ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ವ್ಯಕ್ತಿ ತನಗೆ ಸರಿಹೋಲುವ ವ್ಯಕ್ತಿಯೊಂದಿಗೆ ನಿಲ್ಲಿರಿ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರೊಂದಿಗೆ ನಿಂತರು ಮತ್ತು ಅವರನ್ನು ಆಲಂಗಿಸಿದರು ಹಾಗೂ ಹೀಗೆ ಹೇಳಿದರು: **ಅಂತ ವಲಿಯ್ಯಿ ಫಿದ್ದುನ್‌ಯಾ ವ ವಲಿಯ್ಯಿ ಫಿಲ್ ಆಖಿರತಿ**. ಎಂದರೆ, ನೀನು ಇಹಲೋಕದಲ್ಲೂ ಪರಲೋಕದಲ್ಲೂ ನನ್ನ ಸ್ನೇಹಿತನಾಗಿರುವೆ. (ಮಜ್ಮ ಅಝ್ಝವಾಎದ್ ವ ಮಂಬಅ ಅಲ್‌ಫವಾಎದ್, ಅಲ್ಜುಝಾ ಅತ್ತಾಸಅ, ಪುಟ–66, ಕಿತಾಬ್ ಅಲ್‌ಮನಾಖಿಬ್, ಹದೀಸ್–14493, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಉಸ್ಮಾನ್(ರ) ಸ್ವತಂತ್ರಗೊಳಿಸಿದ ಗುಲಾಮರಾದ ಅಬೂಸಹ್‌ಲ ಹೇಳುತ್ತಾರೆ: ಯೌಮುದ್ದಾರ್‌ನಂದು, ಎಂದರೆ ಹಝ್ರತ್ ಉಸ್ಮಾನ್‌ರ ಮನೆಯನ್ನು ವಿದ್ರೋಹಿಗಳು ಮುತ್ತಿಗೆ ಹಾಕಿ ಶಹೀದ್ ಮಾಡಿದ್ದ ದಿನದಂದು, ನಾನು ಹಝ್ರತ್ ಉಸ್ಮಾನ್‌ರೊಂದಿಗೆ ಹೇಳಿದೆ: ಹೇ ಅಮೀರಲ್ ಮೂಮಿನೀನ್, ಈ ವಿದ್ರೋಹಿಗಳೊಡನೆ ಯುದ್ಧ ಮಾಡಿರಿ. ಹಝ್ರತ್ ಅಬ್ದುಲ್ಲಾಹ್ ಸಹ ಹಝ್ರತ್ ಉಸ್ಮಾನ್‌ರೊಡನೆ ಹೇಳಿದರು: ಹೇ ಅಮೀರಲ್ ಮೂಮಿನೀನ್, ಈ ವಿದ್ರೋಹಿಗಳೊಡನೆ ಯುದ್ಧ ಮಾಡಿರಿ. ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನಾಣೆ, ನಾನು ಹೋರಾಡುವುದಿಲ್ಲ, ಹಝ್ರತ್ ಪೈಗಂಬರ್(ಸ) ನನ್ನೊಡನೆ ಒಂದು ಮಾತಿನ ವಾಗ್ದಾನ ಮಾಡಿದ್ದರು. ಆದ್ದರಿಂದ ಅದು ಈಡೇರಬೇಕೆಂದು ನಾನು ಬಯಸುತ್ತೇನೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಕಸೀರ್ ಸಂಪುಟ–3, ಪುಟ–483–484, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಉಸ್ಮಾನ್(ರ) ಬದ್ರ್ ಯುದ್ಧದಲ್ಲಿ ಭಾಗವಹಿಸದ ಬಗ್ಗೆ, ಉಹದ್ ಯುದ್ಧದಿಂದ ಓಡಿಹೋದ ಬಗ್ಗೆ ಮತ್ತು ಬೈಅತೇ ರಿಝ್ವಾನಿನಲ್ಲಿ ಭಾಗವಹಿಸದ ಕುರಿತು ಆಕ್ಷೇಪಿಸಲಾಗುತ್ತದೆ. ಹಝ್ರತ್ ಉಸ್ಮಾನ್‌ರ ಬಗ್ಗೆ ಕಪಟವಿಶ್ವಾಸಿಗಳು ಆಕ್ಷೇಪವೆತ್ತಿದ್ದರು. ಉಸ್ಮಾನ್ ಬಿನ್ ಮೌಹಿಬ್ ವರದಿ ಮಾಡುತ್ತಾರೆ: ಈಜಿಪ್ಟಿನಿಂದ ಒಬ್ಬ ವ್ಯಕ್ತಿ ಹಜ್ಜ್‌ಗಾಗಿ ಬಂದರು. ಸ್ವಲ್ಪ ಜನರು ಕುಳಿತುಕೊಂಡಿರುವುದಾಗಿ ಆ ವ್ಯಕ್ತಿ ಕಂಡನು. ಫಿತ್ನ ಉಂಟುಮಾಡಲು ಅವನು ಮಾತನಾಡಲು ತೊಡಗಿದನು. ಕುಳಿತುಕೊಂಡಿರುವವರು ಯಾರೆಂದು ಆ ವ್ಯಕ್ತಿ ಜನರೊಡನೆ ಕೇಳಿದನು. ಖುರೈಶಿಗಳೆಂದು ಜನರು ಅವನೊಡನೆ ಹೇಳಿದರು. ಅವರಲ್ಲಿ ಆ ವೃದ್ಧ ವ್ಯಕ್ತಿ ಯಾರೆಂದು ಅವನು ಜನರೊಡನೆ ಕೇಳಿದನು. ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಆಗಿರುವರು ಎಂದು ಜನರು ಹೇಳಿದರು. ಅವನು ಹೇಳಿದನು: ಹೇ ಇಬ್ನು ಉಮರ್, ನಿಮ್ಮೊಂದಿಗೆ ಒಂದು ಸಂಗತಿಯ ಕುರಿತು ಕೇಳುತ್ತೇನೆ. ನೀವು ನನ್ನೊಡನೆ ಹೇಳಿರಿ. ಹಝ್ರತ್ ಉಸ್ಮಾನ್ ಉಹದ್ ಯುದ್ಧದಂದು ಪರಾರಿಯಾಗಿದ್ದರು ಎಂದು ನಿಮಗೆ ಗೊತ್ತೇ? ಹೌದೆಂದು ಅವರು ಹೇಳಿದರು. ಅವನು ಕೇಳಿದನು: ಬದ್ರ್ ಯುದ್ಧದಂದು ಅವರು ಗೈರುಹಾಜರಾಗಿದ್ದರು, ಅದರಲ್ಲಿ ಭಾಗವಹಿಸಿರಲಿಲ್ಲ ಎಂದು ನಿಮಗೆ ಗೊತ್ತೇ? ಹೌದೆಂದು ಅವರು ಹೇಳಿದರು. ಅವನು ಕೇಳಿದನು: ಹಝ್ರತ್ ಉಸ್ಮಾನ್ ಬೈಅತೇ ರಿಝ್ವಾನಿನಲ್ಲೂ ಇರಲಿಲ್ಲ. ಅದರಲ್ಲೂ ಭಾಗಿಯಾಗಿರಲಿಲ್ಲ. ಹೌದೆಂದು ಅವರು ಹೇಳಿದರು. ಆಗ ಆ ವ್ಯಕ್ತಿ ಅಲ್ಲಾಹು ಅಕ್ಬರ್ ಎಂದು ಅಚ್ಚರಿಯೊಂದಿಗೆ ಹೇಳಿದನು. ಹಝ್ರತ್ ಇಬ್ನು ಉಮರ್ ಅವನೊಡನೆ ಹೇಳಿದರು: ಇಲ್ಲಿ ಬಾ, ನೀನು ಆಕ್ಷೇಪವೆತ್ತಿದ್ದೀಯಾ. ನಿನಗೆ ಅದರ ನಿಜಸ್ಥಿತಿಯನ್ನು ಸಹ ಹೇಳುತ್ತೇನೆ. ಉಹದ್ ಯುದ್ಧದಂದು ಅವರು ಓಡಿಹೋದದನ್ನು ಅಲ್ಲಾಹನು ಕ್ಷಮಿಸಿದ್ದಾನೆ ಎಂದು ನಾನು ಸಾಕ್ಷಿ ವಹಿಸುತ್ತೇನೆ. ಆ ಸಮಯದಲ್ಲಿ ಹಝ್ರತ್ ಪೈಗಂಬರ್‌ರನ್ನು(ಸ) ಕೂಡ ಸತ್ಯನಿಷೇಧಿಗಳು ಶಹೀದ್ ಮಾಡಿದ್ದಾರೆ ಎಂಬ ಸುದ್ದಿ ಹರಡಲಾಗಿತ್ತು. ಆ ಸಮಯದ ಇಂತಹ ತಾತ್ಕಾಲಿಕ ಉದ್ವಿಗ್ನತೆಯ ಮತ್ತು ಅಸಮಾಧಾನದ ಸ್ಥಿತಿಯಲ್ಲಿ ಹಝ್ರತ್ ಉಸ್ಮಾನ್(ರ) ಯುದ್ಧ ಮೈದಾನದಿಂದ ಹೊರಟುಹೋಗಿದ್ದರು. ಹಝ್ರತ್ ಉಸ್ಮಾನ್(ರ) ಬದರ್ ಯುದ್ಧದಲ್ಲಿ ಹಾಜರಿರದ ಕಾರಣವೇನೆಂದರೆ, ಹಝ್ರತ್ ಪೈಗಂಬರರ(ಸ) ಮಗಳು, ಎಂದರೆ ಹಝ್ರತ್ ಉಸ್ಮಾನ್‌ರ ಪತ್ನಿ ರೋಗಿಯಾಗಿದ್ದರು. ಪತ್ನಿಯೊಂದಿಗೆಯೇ ಇರಲು ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದ್ದರು. ಬದರ್ ಯುದ್ಧದಲ್ಲಿ ಭಾಗಿಯಾದವರಿಗೆ ಸಿಗುವಂತಹ ಪ್ರತಿಫಲ ಮತ್ತು ಯುದ್ಧ ಸಂಪತ್ತಿನಲ್ಲಿ ಒಂದು ಭಾಗವನ್ನು ಅವರಿಗೆ ಕೊಡುವುದಾಗಿ ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು. ಬೈಅತೇ ರಿಝ್ವಾನಿನಲ್ಲಿ ಅವರು ಹಾಜರಿರದ ಬಗ್ಗೆ ಹೇಳುವುದಾದರೆ, ನೆನಪಿಡಿರಿ, ಮಕ್ಕದಲ್ಲಿ ಹಝ್ರತ್ ಉಸ್ಮಾನ್‌ರಿಗಿಂತ ಹೆಚ್ಚು ಗೌರವಾನ್ವಿತ ವ್ಯಕ್ತಿ ಇರುತ್ತಿದ್ದರೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರ ಜಾಗದಲ್ಲಿ ಅವರನ್ನು ಪ್ರತಿನಿಧಿಯನ್ನಾಗಿ ಕಳುಹಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರನ್ನು ಮಕ್ಕಕ್ಕೆ ಕಳುಹಿಸಿದ್ದರು. ಅವರು ಮಕ್ಕಕ್ಕೆ ಹೋದ ವೇಳೆ ಬೈಅತೇ ರಿಝ್ವಾನ್ ನಡೆದಿತ್ತು. ಬೈಅತೇ ರಿಝ್ವಾನಿನ ವೇಳೆ ಹಝ್ರತ್ ಪೈಗಂಬರ್(ಸ) ತನ್ನ ಬಲಕೈಯಿಂದ ಎಡಗೈಯ ಕಡೆಗೆ ಬೊಟ್ಟು ಮಾಡುತ್ತಾ ಹೇಳಿದರು: ಇದು ಉಸ್ಮಾನ್‌ರ ಕೈಯಾಗಿದೆ. ಅವರು ತನ್ನ ಎಡಗೈಯನ್ನು ತನ್ನ ಬಲಗೈಯ ಮೇಲೆ ಶಕ್ತವಾಗಿ ಇರಿಸುತ್ತಾ ಹೇಳಿದರು: ಇದು ಉಸ್ಮಾನ್‌ರಿಗೆ ಆಗಿದೆ. ಹಝ್ರತ್ ಇಬ್ನು ಉಮರ್(ರ) ಹೀಗೆ ಹೇಳಿದ ನಂತರ ಹೇಳಿದರು: ಈಗ ಈ ಆಕ್ಷೇಪಗಳನ್ನು ತನ್ನೊಂದಿಗೆಯೇ ವಾಪಾಸ್ಸು ಕೊಂಡುಹೋಗು, ನೆನಪಿಡು, ಇವೆಲ್ಲ ಆಕ್ಷೇಪಾರ್ಹ ಸಂಗತಿಗಳಲ್ಲ. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಸ್ಸಹಾಬ, ಹದೀಸ್–3698) ಇದು ಬುಖಾರಿಯ ವರದಿಯಾಗಿದೆ.

ಹಝ್ರತ್ ಪೈಗಂಬರರ(ಸ) ಜೀವಿತದಲ್ಲಿ ಮಸ್ಜಿದ್ ನಬವಿಯನ್ನು ವಿಸ್ತಾರಗೊಳಿಸಲಾಗಿತ್ತು. ಅದರಲ್ಲೂ ಹಝ್ರತ್ ಉಸ್ಮಾನ್‌ರಿಗೆ ಭಾಗಿಯಾಗುವ ಸೌಭಾಗ್ಯ ಸಿಕ್ಕಿತ್ತು. ಅಬೂ ಮಲೀಹ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಮದೀನದ ಮಸೀದಿಯನ್ನು ವಿಸ್ತೃತಗೊಳಿಸುವ ಉದ್ದೇಶದಿಂದ ಒಂದು ತುಂಡುಭೂಮಿಯ ಮಾಲಿಕ್‌ನಾದ ಒಬ್ಬ ಅನ್ಸಾರ್ ಸಹೋದರನೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಈ ತುಂಡುಭೂಮಿಯ ಬದಲಿಗೆ ಸ್ವರ್ಗದಲ್ಲಿ ಮನೆಯಿರುವುದು. ಆದರೆ ಆ ಅನ್ಸಾರ್ ತುಂಡುಭೂಮಿ ನೀಡುವುದನ್ನು ನಿರಾಕರಿಸಿದನು. ಆಗ ಹಝ್ರತ್ ಉಸ್ಮಾನ್(ರ) ಬಂದು ಆ ವ್ಯಕ್ತಿಯೊಡನೆ ಹೇಳಿದರು: ನಿನಗೆ ಈ ತುಂಡುಭೂಮಿಯ ಬದಲಿಗೆ ಹತ್ತು ಸಾವಿರ ದಿರ್ಹಂ ಕೊಡುತ್ತೇನೆ. ಅವರು ಆ ತುಂಡುಭೂಮಿಯನ್ನು ಅವರಿಂದ ಖರೀದಿ ಮಾಡಿದರು. ಹಝ್ರತ್ ಉಸ್ಮಾನ್(ರ) ಹಝುರತ್ ಪೈಗಂಬರರ(ಸ) ಬಳಿಗೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ನಾನು ಅನ್ಸಾರ್ ಸಹೋದರನಿಂದ ಖರೀದಿ ಮಾಡಿರುವ ಈ ತುಂಡುಭೂಮಿಯನ್ನು ನೀವು ನನ್ನಿಂದ ಖರೀದಿ ಮಾಡಿರಿ. ಹೀಗೆ ಹಝ್ರತ್ ಪೈಗಂಬರ್(ಸ) ಆ ತುಂಡುಭೂಮಿಯನ್ನು ಸ್ವರ್ಗದಲ್ಲಿ ಮನೆ ಸಿಗುವುದು ಎಂಬ ವಾಗ್ದಾನದ ಮೇಲೆ ಅವರಿಂದ ಪಡೆದರು. ಅನಂತರ ಹಝ್ರತ್ ಪೈಗಂಬರ್(ಸ) ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರನ್ನು ಕರೆದರು. ಅವರು ಸಹ ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಉಮರರನ್ನು ಕರೆದರು. ಅವರು ಸಹ ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಉಸ್ಮಾನ್(ರ) ಬಂದರು. ಅವರು ಸಹ ಒಂದು ಇಟ್ಟಿಗೆಯನ್ನು ಇರಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಇತರ ಜನರೊಡನೆ ಹೇಳಿದರು: ಈಗ ನೀವೆಲ್ಲರೂ ಇಟ್ಟಿಗೆಗಳನ್ನು ಇರಿಸಿರಿ. ಆಗ ಎಲ್ಲರೂ ಇಟ್ಟಿಗೆಗಳನ್ನು ಇರಿಸಿದರು. ಹೀಗೆ ಮಸೀದಿಯ ವಿಸ್ತರಣೆಯ ತಳಹದಿ ಹಾಕಲಾಯಿತು. (ಮಜ್ಮ ಅಝ್ಝವಾಎದ್ ವ ಮಂಬಅ ಅಲ್‌ಫವಾಎದ್, ಅಲ್ಜುಝಾ ಅತ್ತಾಸಅ, ಪುಟ–57, ಕಿತಾಬ್ ಅಲ್‌ಮನಾಖಿಬ್, ಹದೀಸ್–14524, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಸಮಾಮ ಬಿನ್ ಹಝ್ನ್ ಖಶೀರಿ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ ಮನೆಗೆ ಮುತ್ತಿಗೆ ಹಾಕಲಾದ ದಿನ ನಾನು ಹಾಜರಿದ್ದೆ. ಅಂದು ಹಝ್ರತ್ ಉಸ್ಮಾನ್(ರ) ಕಿಟಕಿಯಿಂದ ಇಣುಕಿ ನೋಡಿಕೊಂಡು ಹೇಳಿದರು: ನಾನು

ಅಲ್ಲಾಹ್ ಮತ್ತು ಇಸ್ಲಾಮಿನ ಹೆಸರಲ್ಲಿ ಆಣೆ ಹಾಕಿಕೊಂಡು ಹೇಳುತ್ತೇನೆ: ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದಾಗ, ರೂಮ ಎಂಬ ಹೆಸರಿನ ಬಾವಿಯಲ್ಲದೇ ಸಿಹಿನೀರಿನ ಬೇರೆ ಏರ್ಪಾಡು ಇರಲಿಲ್ಲ. ರೂಮ ಬಾವಿಯನ್ನು ಯಾರು ಖರೀದಿ ಮಾಡುವರು ಎಂದು ಹಝ್ರತ್ ಪೈಗಂಬರ್(ಸ) ಆಗ ಕೇಳಿದ್ದರು. ಇದರಿಂದ ಖರೀದಿ ಮಾಡುವವನಗೂ ಇತರ ಮುಸ್ಲಿಮರ ಹಾಗೆ ನೀರು ಸಿಗುವುದು, ಮಾತ್ರವಲ್ಲ ಸ್ವರ್ಗದಲ್ಲಿ ಅವನಿಗೆ ಅದಕ್ಕಿಂತ ಉತ್ತಮ ಪ್ರತಿಫಲವಿರುವುದು ಎಂದೂ ಹೇಳಿದರು. ಆಗ ನಾನು ಆ ಬಾವಿಯನ್ನು ನನ್ನ ಸ್ವಂತ ಸಂಪತ್ತಿನಂದ ಖರೀದಿ ಮಾಡಿದ್ದೆ. ಹೀಗೆ ನಾನು ನನ್ನ ಮಡಕೆಯನ್ನು ಮುಸ್ಲಿಮರ ಮಡಕೆಯೊಂದಿಗೆ ಬಾವಿಯಲ್ಲಿ ಹಾಕುತ್ತಿದ್ದೆ. ಆದರೆ ಈಗ ನೀವು ನನ್ನನ್ನು ಅದರಿಂದ ನೀರು ತೆಗೆಯುವುದರಿಂದ ತಡೆಯುತ್ತಿದ್ದೀರಾ? ಮತ್ತು ನನ್ನನ್ನು ಸಮುದ್ರದ ನೀರನ್ನು ಕುಡಿಯಲು ಒತ್ತಾಯ ಪಡಿಸುತ್ತಿದ್ದೀರಾ? ಆಗ ಜನರು ಹೇಳಿದರು: ಅಲ್ಲಾಹನಾಣೆ, ನೀವು ಸರಿಯಾಗಿ ಹೇಳಿದ್ದೀರಿ. ಪುನಃ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಅಲ್ಲಾಹನ ಮತ್ತು ಇಸ್ಲಾಮಿನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ತಬೂಕ್ ಯುದ್ಧದ ಸೈನ್ಯದ ತಯಾರಿ ನನ್ನ ಸ್ವಂತ ಸಂಪತ್ತಿನಿಂದ ಮಾಡಿದ್ದೆ ಎಂದು ನಿಮಗೆ ಗೊತ್ತೇ? ಅಲ್ಲಾಹನಾಣೆ, ಹೌದು ಎಂದು ಜನರು ಹೇಳಿದರು. ಪುನಃ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನ ಮತ್ತು ಇಸ್ಲಾಮಿನ ಹೆಸರಲ್ಲಿ ಆಣೆ ಹಾಕಿಕೊಂಡು ಕೇಳುತ್ತೇನೆ. ಮಸ್ಜಿದ್ ನಬವಿ ನಮಾಝ್ ಮಾಡುವವರಿಗೆ ಸಾಕಾಗದೇ ಬಂದಾಗ, ತುಂಡುಭೂಮಿಯನ್ನು ಇಂತಿಂತಹ ಕುಟುಂಬದಿಂದ ಖರೀದಿ ಮಾಡಿ ಮಸೀದಿಯೊಂದಿಗೆ ಸೇರಿಸುವ ವ್ಯಕ್ತಿಗೆ ಸ್ವರ್ಗದಲ್ಲಿ ಅದಕ್ಕಿಂತ ಉತ್ತಮವಾದ ಪ್ರತಿಫಲ ಸಿಗುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಹೀಗೆ ಆ ತುಂಡುಭೂಮಿಯನ್ನು ನನ್ನ ಸ್ವಂತ ಹಣದಿಂದ ಖರೀದಿ ಮಾಡಿಕೊಂಡು ಮಸೀದಿಯಲ್ಲಿ ಸೇರಿಸಿದೆ. ಈಗ ನೀವು ನನ್ನನ್ನು ಈ ಮಸೀದಿಯಲ್ಲಿ ಎರಡು ರಕಅತ್ ನಮಾಝ್ ಮಾಡುವುದರಿಂದ ತಡೆಯುತ್ತಿದ್ದೀರಾ? ಹಝ್ರತ್ ಉಸ್ಮಾನ್(ರ) ಪುನಃ ಹೇಳಿದರು: ಅಲ್ಲಾಹನ ಮತ್ತು ಇಸ್ಲಾಮಿನ ಹೆಸರಲ್ಲಿ ಆಣೆ ಹಾಕಿಕೊಂಡು ಕೇಳುತ್ತೇನೆ. ಹಝ್ರತ್ ಪೈಗಂಬರ್(ಸ) ಒಂದು ಬಾರಿ ಮಕ್ಕದ ಸಬೀರ್ ಎಂಬ ಹೆಸರಿನ ಪರ್ವತದಲ್ಲಿ ಇದ್ದರು. ಅವರೊಂದಿಗೆ ಹಝ್ರತ್ ಅಬೂಬಕರ್, ಹಝ್ರತ್ ಉಮರ್ ಮತ್ತು ನಾನಿದ್ದೆ. ಪರ್ವತ ಕಂಪಿಸಿದಾಗ, ಹಝ್ರತ್ ಪೈಗಂಬರ್(ಸ) ತನ್ನ ಕಾಲನ್ನು ಅದರ ಮೇಲೆ ಹೊಡೆಯುತ್ತಾ ಹೇಳಿದರು: ಹೇ ಸಬೀರ್, ಕಂಪಿಸಬೇಡ, ಏಕೆಂದರೆ, ನಿನ್ನ ಮೇಲೆ ಒಬ್ಬ ಪ್ರವಾದಿ, ಒಬ್ಬ ಸಿದ್ದೀಖ್ ಮತ್ತು ಇಬ್ಬರು ಶಹೀದ್‌ರು ಇದ್ದಾರೆ. ಆಗ ಆ ಜನರು ಹೇಳಿದರು: ಅಲ್ಲಾಹನಾಣೆ, ಸರಿಯಾಗಿಯೇ ಹೇಳಿದ್ದೀರಿ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹು ಅಕ್ಬರ್, ಕಅ್‌ಬದ ಪ್ರಭುವಿನ ಆಣೆ, ಈ ಜನರು ನನ್ನ ಪರವಾಗಿ ಸಾಕ್ಷಿ ನೀಡಿದ್ದಾರೆ. ಎಂದರೆ, ನಾನು ಶಹಾದತಿನ ಪದವಿಯನ್ನು ಪಡೆಯುವೆನು ಎಂದು ಇವರು ಸಾಕ್ಷ್ಯವಹಿಸಿದ್ದಾರೆ. (ಸುನನ್ ಅನ್ನಸಾಇ ಕಿತಾಬುಲ್ ಅಹ್ಬಾಸ್, ಬಾಬ್ ಡಖ್ಬಿಲ್ ಮಸಾಜಿದ್, ಹದೀಸ್–3638)

ಮಸ್ಜಿದ್ ನಬವಿಯ ಹೆಚ್ಚಿನ ವಿಸ್ತರಣೆ ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ನಡೆದಿತ್ತು. ಆದ್ದರಿಂದ ಅದರ ಸಂಕ್ಷಿಪ್ತ ಚರಿತ್ರೆ ಮತ್ತು ಆರಂಭದ ಸ್ಥಿತಿಗತಿಗಳು ಮತ್ತು ವಿಸ್ತರಣೆ ಬಗ್ಗೆ ವಿವರಿಸಲಾದ ಸಂಗತಿಗಳನ್ನು ಹೇಳುತ್ತೇನೆ: ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮಾಡಲಾದ ವಿಸ್ತಾರದ ಬಗ್ಗೆ ಒಂದು ನೋಟ್ ಹೀಗೆಯೂ ಇದೆ: ಹಝ್ರತ್ ಪೈಗಂಬರ್(ಸ) ಹಿಜರಿ 1ರ, ರಬೀಉಲ್ ಅವ್ವಲ್ ತಿಂಗಳ (ಕ್ರಿ.ಶ. 622, ಅಕ್ಟೋಬರ್) ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ಕೈಗಳಿಂದ ಮಸ್ಜಿದ್ ನಬವಿಯ ಅಡಿಗಲ್ಲನ್ನು ಹಾಕಿದ್ದರು. ಅದರ ಅಡಿಪಾಯ ಸುಮಾರು ಒಂದುವರೆ ಮೀಟರ್ ಆಳವಾಗಿತ್ತು. ಬಂಡೆಕಲ್ಲಿನಿಂದ ತಯಾರಿಸಲಾದ ಇಟ್ಟಿಗೆಯಿಂದ ಅಡಿಪಾಯದ ಗೋಡೆ ತಯಾರಿಸಲಾಗಿತ್ತು. ಮೇಲಿನ ಗೋಡೆಯನ್ನು ಜೇಡಿಮಣ್ಣಿನಿಂದ ತಯಾರಿಸಿ ಬಿಸಿಲಿನಲ್ಲಿ ಒಣಗಿಸಲಾದ ಇಟ್ಟಿಗೆಯಿಂದ ಮಾಡಲಾಗಿತ್ತು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–430, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಮಸೀದಿಯ ಗೋಡೆಗಳು ಸುಮಾರು ಮುಕ್ಕಾಲು ಮೀಟರ್ ಅಗಲದ್ದಾಗಿತ್ತು. ಎಂದರೆ, ಸುಮಾರು ಎರಡುವರೆ ಫೀಟ್. ಗೋಡೆಯ ಎತ್ತರ ಸುಮಾರು ಮೂರುವರೆ ಮೀಟರ್ ಆಗಿತ್ತು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–432, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಹಿಜರಿ 1ರ, ಶವ್ವಾಲ್ ತಿಂಗಳಲ್ಲಿ (ಕ್ರಿ.ಶ. 623, ಎಪ್ರಿಲ್) ನಿರ್ಮಾಣ ಕೆಲಸ ಪೂರ್ಣವಾಯಿತು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–435, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಹಝ್ರತ್ ಖಾರ್‌ಜ ಬಿನ್ ಝೈದ್ ಬಿನ್ ಸಾಬಿತ್‌ರ ವರದಿ ಹೀಗಿದೆ: ಹಝ್ರತ್ ಪೈಗಂಬರ್(ಸ) ತನ್ನ ಮಸೀದಿಯ ಉದ್ದವನ್ನು ಸುಮಾರು 35 ಮೀಟರ್ ಇರಿಸಿದ್ದರು. ಅದರ ಅಗಲವನ್ನು ಸುಮಾರು 30 ಮೀಟರ್ ಇರಿಸಿದ್ದರು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–437–438, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮಸ್ಜಿದ್ ನಬವಿಯ ಮೊದಲ ವಿಸ್ತರಣೆ ಮತ್ತು ಪುನರ್ನಿರ್ಮಾಣದ ಕೆಲಸ ಹಿಜರಿ 7ರ ಮುಹರ್ರಂ ತಿಂಗಳಲ್ಲಿ (ಕ್ರಿ.ಶ. 628, ಜೂನ್) ನಡೆಯಿತು. ಹಝ್ರತ್ ಪೈಗಂಬರ್(ಸ) ಖೈಬರ್ ಯುದ್ಧದಿಂದ ವಿಜಯಿಯಾಗಿ ಮರಳಿದಾಗ, ಅವರು ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣವನ್ನು ಮಾಡಲು ಆದೇಶಿಸಿದರು. ಮಸೀದಿಯ ವಿಸ್ತರಣೆ ದಕ್ಷಿಣ ಮತ್ತು ಪೂರ್ವ ದಿಕ್ಕುಗಳ ಕಡೆಗೆ ಮಾಡಲಾಗಿರಲಿಲ್ಲ. ಹೆಚ್ಚಿನ ವಿಸ್ತರಣೆ ಉತ್ತರ ದಿಕ್ಕು ಮತ್ತು ಸ್ವಲ್ಪ ಪಶ್ಚಿಮ ದಿಕ್ಕಿನ ಕಡೆಗೆ ಮಾಡಲಾಗಿತ್ತು. ಉತ್ತರ ದಿಕ್ಕಿನಲ್ಲಿ ಸಹಾಬರ ಕೆಲವು ಮನೆಗಳಿದ್ದುವು. ಮಸ್ಜಿದ್ ನಬವಿಯ ಉತ್ತರ ದಿಕ್ಕಿನಲ್ಲಿ ಒಬ್ಬ ಅನ್ಸಾರಿ ಸಹಾಬಿಯ ಮನೆಯೂ ಇತ್ತು. ಅವರಿಗೆ ಅವರ ಮನೆಯನ್ನು ಮಸೀದಿಗೆ ಬಿಟ್ಟುಕೊಡಲು ಸ್ವಲ್ಪ ಹಿಂಜರಿಕೆ ಇತ್ತು. ನಾನು ಮೊದಲು ಹೇಳಿದಂತೆ, ಹಝ್ರತ್ ಉಸ್ಮಾನ್(ರ) ತನ್ನ ಜೇಬಿನಿಂದ ಹತ್ತು ಸಾವಿರ ದಿನಾರ್ ಕೊಟ್ಟು ಆ ಮನೆಯನ್ನು ಖರೀದಿ ಮಾಡಿ ಹಝ್ರತ್ ಪೈಗಂಬರರ(ಸ) ಮುಂದೆ ಇರಿಸಿದರು. ಹೀಗೆ ಮಸೀದಿಯ ವಿಸ್ತರಣೆ ಹೆಚ್ಚಾಗಿ ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿ ಮಾಡಲು ಸಾಧ್ಯವಾಗಿತ್ತು. ಈ ವಿಸ್ತರಣೆಯ ನಂತರ ಮಸೀದಿಯ ಒಟ್ಟು ಸುತ್ತಳತೆ 50 ಚದರ ಮೀಟರ್ ಆಯಿತು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–446–447, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಹಝ್ರತ್ ಉಮರರ ಕಾಲದಲ್ಲಿ ಮಸ್ಜಿದ್ ನಬವಿಯ ಎರಡನೇ ವಿಸ್ತರಣೆ ಹಿಜರೀ 17ರಲ್ಲಿ ನಡೆಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮಸೀದಿ ಸುಡದ ಇಟ್ಟಿಗೆಗಳಿಂದ ನಿರ್ಮಿಸಲಾಗಿತ್ತು. ಅದರ ಚಾವಣಿ ಖರ್ಜೂರದ ಕೊಂಬೆಗಳಿಂದ ಮತ್ತು ಎಲೆಗಳಿಂದ ತಯಾರಿಸಲಾಗಿತ್ತು. ಅದರ ಕಂಬಗಳು ಖರ್ಜೂರದ ಬೊಡ್ಡೆಗಳಿಂದ ಮಾಡಲಾಗಿದ್ದುವು. ಹಝ್ರತ್ ಅಬೂಬಕರ್ ಅದನ್ನು ಅದೇ ಸ್ಥಿತಿಯಲ್ಲಿ ಇರಿಸಿದ್ದರು. ಅದರಲ್ಲಿ ಯಾವುದೇ ಬದಲಾವಣೆ ಮತ್ತು ವಿಸ್ತರಣೆ ಮಾಡಿರಲಿಲ್ಲ. ಹಝ್ರತ್ ಉಮರ್(ರ) ಅದನ್ನು ಪುನರ್ನಿರ್ಮಿಸಿದರು ಮತ್ತು ವಿಸ್ತರಣೆ ಮಾಡಿದರು. ಆದರೆ ರೂಪ ಮತ್ತು ನಿರ್ಮಾಣ ಶೈಲಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಿರಲಿಲ್ಲ. ಹೇಗಿದ್ದುವೋ ಅದೇ ಆಧಾರದಲ್ಲಿ ಅಥವಾ ಹಳೆಯ ಭಾಗದಲ್ಲಿ ಏನೂ ಬದಲಾವಣೆ ಮಾಡಿರಲಿಲ್ಲ. ಅವರು ಅದನ್ನು ಅದೇ ಶೈಲಿಯಲ್ಲಿ ಮಾಡಿದರು. ಕೇವಲ ವಿಸ್ತರಣೆ ನಡೆದಿತ್ತು. ಅದರ ಚಾವಣಿ ಮೊದಲಿನ ಹಾಗೆಯೇ ಖರ್ಜೂರದ ಎಲೆಗಳಿಂದಲೇ ಆಗಿತ್ತು. ಅವರು ಅದರಲ್ಲಿ ಮರದ ಕಂಬಗಳನ್ನು ಅಳವಡಿಸಿದರು. ಹಿಜರೀ 17ರಲ್ಲಿ ಹಝ್ರತ್ ಉಮರ್(ರ) ಮಸೀದಿಯ ವಿಸ್ತರಣೆಯ ಕೆಲಸ ತನ್ನ ಮೇಲ್ನೋಟದಲ್ಲಿ ಮುಕ್ತಾಯಗೊಳಿಸಿದರು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–459, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007)

ಅನಂತರ ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣವಾಯಿತು. ಇದು ಹಿಜರೀ 29ರ ಘಟನೆಯಾಗಿದೆ. ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುನರ್ನಿರ್ಮಾಣ ಮಾಡಿದಾಗ, ಅದನ್ನು ಮನೋಹರ ಮತ್ತು ಗಟ್ಟಿಗೊಳಿಸಲಿಕ್ಕಾಗಿ ಜಿಪ್ಸಮ್ ಕಲ್ಲುಗಳನ್ನು ಉಪಯೋಗಿಸಲಾಯಿತು ಮತ್ತು ಕೆತ್ತನೆಯನ್ನು ಹಾಗೂ ಅಲಂಕಾರವನ್ನು ಮಾಡಲಾಯಿತು. ಹಝ್ರತ್ ಉಸ್ಮಾನ್(ರ) ಕಲ್ಲುಗಳ ಗೋಡೆಗಳನ್ನು ನಿರ್ಮಿಸಿದರು. ಅದರಲ್ಲಿ ಅಲಂಕಾರ ಕೆಲಸಗಳು ಮಾಡಲಾಗಿತ್ತು. ಮಸ್ಜಿದ್ ನಬವಿಯಲ್ಲಿ ಮೊದಲ ಬಾರಿಗೆ ಸುಣ್ಣ ಬಳಿಯಲಾಯಿತು. ಹಝ್ರತ್ ಉಸ್ಮಾನ್(ರ) ಹಿಜರೀ 24ರಲ್ಲಿ ಖಲೀಫರಾಗಿ ಚುನಾಯಿತರಾದಾಗ, ಅಂಗಳ ಸಣ್ಣದಾಗಿದೆ ಎಂದು ಜನರು ದೂರುತ್ತಾ ಮಸೀದಿಯನ್ನು ವಿಸ್ತಾರಗೊಳಿಸಲು ವಿನಂತಿಸಿದರು. ವಿಶೇಷವಾಗಿ ಜುಮಾ ನಮಾಝ್‌ನಲ್ಲಿ ಜನರು ಹೆಚ್ಚಿರುವ ಕಾರಣ ಮಸೀದಿಯ ಹೊರಗಿನ ಭಾಗದಲ್ಲಿ ನಮಾಝ್ ನಿರ್ವಹಿಸಬೇಕಾಗಿ ಬರುತ್ತಿತ್ತು. ಆದ್ದರಿಂದ ಹಝ್ರತ್ ಉಸ್ಮಾನ್(ರ) ಸಹಾಬರೊಡನೆ ಸಮಾಲೋಚನೆ ನಡೆಸಿದರು. ಹಳೆಯ ಮಸೀದಿಯನ್ನು ಕೆಡವಿ ಅದರ ಜಾಗದಲ್ಲಿ ಹೊಸ ಮಸೀದಿಯನ್ನು ನಿರ್ಮಿಸಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು. ಒಂದು ದಿನ ಝುಹರ್ ನಮಾಝಿನ ನಂತರ ಹಝ್ರತ್ ಉಸ್ಮಾನ್ ಮಿಂಬರ್‌ನಲ್ಲಿ ಭಾಷಣ ಮಾಡುತ್ತಾ ಹೀಗೆ ಹೇಳಿದರು: ಸಕಲ ಸ್ತುತಿಗಳು ಅಲ್ಲಾಹನಗೆ ಸಲ್ಲುತ್ತವೆ. ನಾನು ಮಸೀದಿಯನ್ನು ಬೀಳಿಸಿ ಅದರ ಜಾಗದಲ್ಲಿ ಹೊಸ ಮಸೀದಿಯನ್ನು ಮಾಡಲು ಬಯಸುತ್ತಿದ್ದೇನೆ ಮತ್ತು ನಾನು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಕ್ಕೆ ಸಾಕ್ಷಿ ಹೇಳುತ್ತೇನೆ: ಯಾರು ಮಸೀದಿ ನಿರ್ಮಾಣ ಮಾಡುತ್ತಾನೋ ಅವನಿಗೆ ಅಲ್ಲಾಹನು ಸ್ವರ್ಗದಲ್ಲಿ ಒಂದು ಮನೆಯನ್ನು ದಯಪಾಲಿಸುತ್ತಾನೆ. ನನಗಿಂತ ಮುಂಚೆ ಹಝ್ರತ್ ಉಮರ್

ಫಾರೂಖ್‌ರ ಕೈಗಳಿಂದ ಮಸ್ಜಿದ್ ನಬವಿಯ ವಿಸ್ತರಣೆ ಮತ್ತು ಪುರ್ನನಿರ್ಮಾಣ ನನಗೆ ಒಂದು ಮಾದರಿ ಮತ್ತು ಉದಾಹರಣೆಯಾಗಿದೆ. ನಾನು ಉತ್ತಮ ಸಲಹೆಗಾರರಾದ ಸಹಾಬಿಗಳೊಡನೆ ಸಮಾಲೋಚನೆ ನಡೆಸಿದೆ. ಮಸ್ಜಿದ್ ನಬವಿಯನ್ನು ಕೆಡವಿ ಅದನ್ನು ಪುನಃ ನಿರ್ಮಿಸಬೇಕು ಎಂಬುದಾಗಿದೆ ಅವರೆಲ್ಲರ ಒಮ್ಮತಾಭಿಪ್ರಾಯ.

ಆಗ ಕೆಲವು ಸಹಾಬಿಯರು ಈ ವಿಷಯದಲ್ಲಿ ತಮ್ಮ ಚಿಂತೆಗಳನ್ನು ಮುಂದಿರಿಸಿದರು. ಮಸೀದಿಯ ಬಹಳ ಸಮೀಪ ವಾಸಿಸುತ್ತಿದ್ದ ಸಹಾಬಿಯರು ಹೀಗೆ ಹೇಳುವವರಲ್ಲಿ ಸೇರಿದ್ದರು. ಮಸೀದಿಯನ್ನು ಧ್ವಂಸಗೊಳಿಸಬಾರದು ಎಂದಾಗಿತ್ತು ಅವರ ಅಭಿಪ್ರಾಯ. ಏಕೆಂದರೆ ಈ ಯೋಜನೆಯಿಂದ ಅವರ ಮನೆಗಳನ್ನು ಬೀಳಿಸಬೇಕಾಗುತ್ತಿತ್ತು. ಜನಸಾಮಾನ್ಯರಲ್ಲಿ ಹೆಚ್ಚಿನವರು ವಿಸ್ತರಣೆಯ ಯೋಜನೆಯನ್ನು ಬೆಂಬಲಿಸುತ್ತಿದ್ದರು. ಆದರೆ ಕೆಲವರು ನಿರಾಕರಿಸುತ್ತಿದ್ದರು. ಹಝ್ರತ್ ಅಫ್ಲಹ್ ಬಿನ್ ಹಮೀದ್ ವರದಿ ಮಾಡುತ್ತಾರೆ: ಜನರ ಅಭಿಪ್ರಾಯಗಳನ್ನು ಕೇಳಲಿಕ್ಕಾಗಿ ಹಝ್ರತ್ ಉಸ್ಮಾನ್(ರ) ಮಿಂಬರನ್ನು ಏರಲು ಬಯಸಿದಾಗ, ಮರ್ವಾನ್ ಬಿನ್ ಹಕಂ ಹೇಳಿದರು: ನಿಸ್ಸಂಶಯವಾಗಿಯೂ ಇದೊಂದು ಸತ್ಕರ್ಮವಾಗಿದೆ. ಆದ್ದರಿಂದ ಜನರು ಅಭಿಪ್ರಾಯಗಳನ್ನು ಕೇಳುವ ಆವಶ್ಯಕತೆಯೇನು? ಆಗ ಹಝ್ರತ್ ಉಸ್ಮಾನ್(ರ) ಅದನ್ನು ಖಂಡಿಸುತ್ತಾ ಹೇಳಿದರು: ನಿನಗೆ ಒಳಿತಾಗಲಿ, ನಾನು ಯಾವುದೇ ವಿಷಯದಲ್ಲಿ ಒತ್ತಾಯ ಮತ್ತು ಬಲಪ್ರಯೋಗ ನಡೆಸುವುದನ್ನು ಇಷ್ಟಪಡುವುದಿಲ್ಲ. ನನಗೆ ಅವರೊಂದಿಗೆ ಖಂಡಿತ ಸಮಾಲೋಚನೆ ನಡೆಸಬೇಕಾಗಿದೆ. ಹೀಗೆ ಹಝ್ರತ್ ಉಸ್ಮಾನ್(ರ) ಜನರ ಸಮ್ಮತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾದಾಗ, ಮಸ್ಜಿದ್ ನಬವಿಯ ಉತ್ತರ ದಿಕ್ಕಿನಲ್ಲಿರುವ ಮನೆಗಳನ್ನು ಖರೀದಿ ಮಾಡಿಕೊಂಡು ಅದರ ಭೂಮಿಯನ್ನು ಪಡೆದರು. ಪ್ರತಿಫಲವಾಗಿ ಸಹಾಬಿಯರಿಗೆ ಬಹಳ ಹಣವನ್ನು ಕೊಡಲು ಹಝ್ರತ್ ಉಸ್ಮಾನ್(ರ) ತಯಾರಾಗಿದ್ದರೂ ಕೆಲವು ಸಹಾಬಿಯರು ತಮ್ಮ ಮನೆಗಳನ್ನು ಬಿಟ್ಟುಕೊಡಲು ತಯಾರಾಗಿರಲಿಲ್ಲ. ಸುಮಾರು 4ವರ್ಷಗಳು ಕಳೆದುವು. ಆದರೆ ಉಲ್ಲೇಖಾರ್ಹ ಯಾವುದೇ ಬದಲಾವಣೆ ಉಂಟಾಗಲಿಲ್ಲ. ಹಝ್ರತ್ ಉಬೈದುಲ್ಲಾಹ್ ಖೂಲಾನಿ ವರದಿ ಮಾಡುತ್ತಾರೆ: ಜನರು ತನ್ನ ಮನೆಗಳನ್ನು ಬಿಟ್ಟುಕೊಡುವುದರಿಂದ ಹಿಂಜರಿಕೆ ತೋರಿಸುತ್ತಿದ್ದಾಗ, ವಾದ ವಿವಾದಗಳು ದೀರ್ಘಗೊಂಡಾಗ, ಹಝ್ರತ್ ಉಸ್ಮಾನ್(ರ) ಹೀಗೆ ಹೇಳುತ್ತಿರುವುದಾಗಿ ನಾನು ಕೇಳಿದೆ: ನೀವು ಬಹಳ ಮಾತುಕತೆ ನಡೆಸಿದ್ದೀರಿ. ನಾನು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಕೇಳಿದ್ದೇನೆ: ಯಾರು ಅಲ್ಲಾಹನ ಸಂಪ್ರೀತಿಗಾಗಿ ಮಸೀದಿಯನ್ನು ನಿರ್ಮಾಣ ಮಾಡುತ್ತಾರೋ ಅವರಿಗೆ ಅಲ್ಲಾಹನು ಪ್ರತಿಫಲವಾಗಿ ಅಂತಹದ್ದೇ ಒಂದು ಅರಮನೆಯನ್ನು ಸ್ವರ್ಗದಲ್ಲಿ ಮಾಡಿಕೊಡುವನು.

ಅದೇ ರೀತಿಯಲ್ಲಿ ಹಝ್ರತ್ ಮಹ್ಮೂದ್ ಬಿನ್ ಲಬೀದ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ಪುನರ್ನಿರ್ಮಾಣ ಮಾಡಲು ಉದ್ದೇಶಿಸಿದಾಗ, ಕೆಲವು ಜನರಿಗೆ ಅವರ ಯೋಜನೆ ಇಷ್ಟಬರಲಿಲ್ಲ. ಮಸ್ಜಿದ್ ನಬವಿಯನ್ನು ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಇದ್ದ ಅದೇ ಸ್ಥಿತಿಯಲ್ಲಿ ಇರಿಸಬೇಕೆಂದಾಗಿತ್ತು ಅವರ ಒತ್ತಾಯ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಯಾರು ಅಲ್ಲಾಹನ ಸಂಪ್ರೀತಿಗಾಗಿ ಮಸೀದಿಯನ್ನು ನಿರ್ಮಾಣ ಮಾಡುತ್ತಾರೋ ಅವರಿಗೆ ಅಲ್ಲಾಹನು ಪ್ರತಿಫಲವಾಗಿ ಅಂತಹದ್ದೇ ಒಂದು ಮಹಲ್ಲನ್ನು ಸ್ವರ್ಗದಲ್ಲಿ ಮಾಡಿಕೊಡುವನು. ಹೇಗಿದ್ದರೂ ಹಝ್ರತ್ ಉಸ್ಮಾನ್(ರ) ಜನರ ಸಮ್ಮತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾದಾಗ, ಅವರು ಹಿಜರೀ 29ರ ರಬೀಉಲ್ ಅವ್ವಲ್ ತಿಂಗಳಲ್ಲಿ (ಕ್ರಿ.ಶ. 649, ನವೆಂಬರ್) ಕೆಲಸವನ್ನು ಶುರುಮಾಡಿದರು. ಪುನರ್ನಿರ್ಮಾಣದ ಕೆಲಸಕ್ಕೆ ಕೇವಲ 10 ತಿಂಗಳುಗಳ ಕಾಲ ತಗುಲಿತ್ತು.  ಹೀಗೆ ಹಿಜರೀ 30ರ ಮುಹರ್ರಂ ತಿಂಗಳಲ್ಲಿ ಮಸ್ಜಿದ್ ನಬವೀ ತಯಾರಾಯಿತು. ಹಝ್ರತ್ ಉಸ್ಮಾನ್(ರ) ಸ್ವತಃ ಕೆಲಸದ ಮೇಲ್ನೋಟವಹಿಸುತ್ತಿದ್ದರು. ದಿನದ ಸಮಯದಲ್ಲಿ ಸದಾ ಉಪವಾಸವಿಡುತ್ತಿದ್ದರು. ರಾತ್ರಿ ಸಮಯದಲ್ಲಿ ತುಂಬ ನಿದ್ರೆ ಬಂದರೆ, ಮಸ್ಜಿದ್ ನಬವಿಯಲ್ಲೇ ಆರಾಮ ಮಾಡುತ್ತಿದ್ದರು. ಅಬ್ದುಲ್ಲಾಹ್ ಬಿನ್ ಸಫೀನ ವರದಿ ಮಾಡುತ್ತಾರೆ: ಮಸ್ಜಿದ್ ನಬವಿಯ ನಿರ್ಮಾಣಕ್ಕಾಗಿ ಸಾಮಾನುಗಳನ್ನು ಎತ್ತಿ ಹಝ್ರತ್ ಉಸ್ಮಾನ್‌ರ ಬಳಿಗೆ ತರಲಾಗುತ್ತಿತ್ತು ಎಂಬುದನ್ನು ನಾನು ನೋಡಿದ್ದೇನೆ. ಹಝ್ರತ್ ಉಸ್ಮಾನ್(ರ) ನಿಂತುಕೊಂಡು ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದರು. ಅನಂತರ ನಮಾಝಿನ ಸಮಯವಾಗುವಾಗ, ಅವರೊಂದಿಗೆ ನಮಾಝ್ ನಿರ್ವಹಿಸುತ್ತಿದ್ದರು. ಕೆಲವು ಸಮಯ ಅಲ್ಲೇ ನಿದ್ದೆ ಮಾಡುತ್ತಿದ್ದರು. ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ದಕ್ಷಿಣ ದಿಕ್ಕಿನಲ್ಲಿ ಖಿಬ್ಲದ ಭಾಗದಲ್ಲಿ ವಿಸ್ತಾರಗೊಳಿಸಿದರು. ಖಿಬ್ಲದ ಕಡೆಯ ಗೋಡೆಯನ್ನು ಇಂದು ಅದು ಇರುವ ತನಕ ವಿಸ್ತಾರಗೊಳಿಸಿದರು. ಉತ್ತರ ದಿಕ್ಕಿನಲ್ಲಿ ಸುಮಾರು 25 ಮೀಟರ್‌ನ ವರ್ಧನೆ ಮಾಡಲಾಯಿತು. ಸ್ವಲ್ಪ ವಿಸ್ತರಣೆ ಪಶ್ಚಿಮ ದಿಕ್ಕಿನಲ್ಲೂ ಮಾಡಲಾಯಿತು. ಆದರೆ ಹಝ್ರತ್ ಪೈಗಂಬರರ(ಸ) ಪತ್ನಿಯರ ಮನೆಗಳಿದ್ದ ಪೂರ್ವ ದಿಕ್ಕಿನಲ್ಲಿ ಯಾವುದೇ ರೀತಿಯ ವಿಸ್ತರಣೆ ಮಾಡಿರಲಿಲ್ಲ.

ಹಝ್ರತ್ ಉಸ್ಮಾನ್‌ರ ಕಾಲಘಟ್ಟದಲ್ಲಿ ಮಸೀದಿಯ ಬಾಗಿಲುಗಳ ಸಂಖ್ಯೆ ಆರಾಗಿತ್ತು. ಮೊದಲ ಬಾರಿಗೆ ಮಸ್ಜಿದ್ ನಬವಿಯಲ್ಲಿ ಕಲ್ಲುಗಳ ಮೇಲೆ ಅಲಂಕಾರಗಳನ್ನು ಮಾಡಲಾದುವು. ಅದರಲ್ಲಿ ಸುಣ್ಣ ಬಳಿಯಲಾಯಿತು. ಹಝ್ರತ್ ಖಾರ್ಜ ಬಿನ್ ಝೈದ್‌ರ ವರದಿಯ ಪ್ರಕಾರ ಹಝ್ರತ್ ಉಸ್ಮಾನ್(ರ) ಮಸ್ಜಿದ್ ನಬವಿಯ ಪೂರ್ವ ಮತ್ತು ಪಶ್ಚಿಮದ ಗೋಡೆಗಳಲ್ಲಿ ಕಿಟಕಿಗಳನ್ನು ಅಳವಡಿಸಿದ್ದರು. ಮಸೀದಿಯ ವಿಸ್ತರಣೆಗಾಗಿ ಹಝ್ರತ್ ಉಸ್ಮಾನ್‌ರಿಗೆ ಖರೀದಿ ಮಾಡಬೇಕಾದ ಮನೆಗಳಲ್ಲಿ ಹಝ್ರತ್ ಉಮ್ಮುಲ್ ಮೂಮಿನೀನ್ ಹಝ್ರತ್ ಹಫ್ಸರ ಮನೆ ಕೂಡ ಸೇರಿತ್ತು. ಅವರಿಗೆ ಅದರ ಬದಲಿಗೆ ಖಿಬ್ಲಕ್ಕೆ ಸೇರಿಕೊಂಡಿದ್ದ ಭಾಗದಲ್ಲಿ ಮನೆಯನ್ನು ನಿರ್ಮಿಸಿ ನೀಡಲಾಯಿತು. ಒಂದು ಚಿಕ್ಕ ಬಾಗಿಲಿನ ಮೂಲಕ ಮಸೀದಿಯಿಂದ ಅವರ ಮನೆಗೆ ಹೋಗುವುದನ್ನು ಸುಲಭಗೊಳಿಸಲಾಯಿತು. ಅದಲ್ಲದೇ ಹಝ್ರತ್ ಜಾಫರ್ ಬಿನ್ ಅಬೂತಾಲಿಬ್‌ರ ವಾರಸುದಾರರಿಂದ ಅವರ ಮನೆಯ ಅರ್ಧ ಭಾಗವನ್ನು ಒಂದು ಲಕ್ಷ ದಿರ್ಹಂ ಕೊಟ್ಟು ಖರೀದಿ ಮಾಡಲಾಯಿತು. ಅದೇ ರೀತಿಯಲ್ಲಿ ದಾರುಲ್ ಅಬ್ಬಾಸ್‌ರ ಕೆಲವು ಭಾಗವನ್ನು ಮಸ್ಜಿದ್ ನಬವಿಯಲ್ಲಿ ಸೇರಿಸಲಾಯಿತು. ಕಿಬ್ಲದ ಕಡೆಯಿರುವ ಗೋಡೆಯನ್ನು ದಕ್ಷಿಣ ದಿಕ್ಕಿಗೆ ವಿಸ್ತಾರಗೊಳಿಸಲಾದದ್ದು ಅಲ್ಲದೇ, ಮಸ್ಜಿದ್ ನಬವಿಯಲ್ಲಿ ಮಾಡಲಾದ ಮುಖ್ಯವಾದ ಬದಲಾವಣೆ, ಮಿಹ್ರಾಬೇ ನಬಿಯ ಜಾಗವನ್ನು ಸಹ ಅದಕ್ಕೆ ನೇರವಾಗಿ ಕಿಬ್ಲದ ಗೋಡೆಗಳು ಇದ್ದ ಅಷ್ಟೇ ಮುಂದಕ್ಕೆ ವಿಸ್ತರಿಸಲಾಯಿತು ಎಂಬುದಾಗಿದೆ. ಅಲ್ಲೇ ನಾವೀಗ ಮಿಹ್ರಾಬೇ ಉಸ್ಮಾನಿಯನ್ನು ನೋಡಬಹುದಾಗಿದೆ. ಆವೆಮಣ್ಣಿನ ಬದಲಿಗೆ ಅವರು ಪುಡಿ ಮಾಡಿದ ಕಲ್ಲುಗಳನ್ನು ಉಪಯೋಗಿಸಿದ್ದರು. ಕಲ್ಲುಗಳಿಂದ ಮಾಡಲಾದ ಕಂಬಗಳಲ್ಲಿ ಸೀಸದಿಂದ ಮಾಡಲಾದ ಕಂಬಿಗಳನ್ನು ಹಾಕಿಸಲಾಗಿತ್ತು. ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಕಾಲದಲ್ಲಿ ಖರ್ಜೂರ ಮರದಿಂದ ತಯಾರಿಸಲಾದ ಕಂಬಗಳು ಇದ್ದ ಸ್ಥಳದಲ್ಲೇ ಹೊಸ ಕಂಬಗಳನ್ನು ನಿರ್ಮಾಣ ಮಾಡುವಂತೆ ವಿಶೇಷವಾಗಿ ಗಮನವಹಿಸಲಾಗಿತ್ತು.

ಜೆರುಸಲೇಮ್‌ನಲ್ಲಿ ಸುಖ್‌ರದ ಗುಮ್ಮಟವನ್ನು ನಿರ್ಮಿಸಲು ಬೈಝಂಟೀನರು ಉಪಯೋಗಿಸಿದಂತಹ ಸಾಮಾನುಗಳು ಮತ್ತು ಅದೇ ನಿರ್ಮಾಣ ಶೈಲಿಯನ್ನು ಮಸೀದಿಯ ನಿರ್ಮಾಣದಲ್ಲಿ ಉಪಯೋಗಿಸಲಾಗಿತ್ತು. ಹಝ್ರತ್ ಪೈಗಂಬರರ(ಸ) ಮಿಹ್ರಾಬ್‌ನಲ್ಲಿ ನಿಂತುಕೊಂಡು ನಮಾಝಿನ ಇಮಾಮತ್ ಮಾಡುತ್ತಿದ್ದ ವೇಳೆ ಹಝ್ರತ್ ಉಮರರ(ಸ) ಶಹಾದತ್ ನಡೆದಿತ್ತು. ಇಂತಹ ದುರ್ಘಟನೆ ಇನ್ನು ಮುಂದೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಿಕ್ಕಾಗಿ ಮತ್ತು ಇಮಾಮಿನ ಹಿಂದೆ ಇರುವವರು ಇಮಾಮನ್ನು ನೋಡುವಂತಾಗಲು ಮಿಹ್ರಾಬಿನ ಜಾಗದಲ್ಲಿ ಮಣ್ಣಿನ ಇಟ್ಟಿಗೆಗಳಿಂದ ತಯಾರಿಸಲಾದ ಒಂದು ಮೇಲ್ಚಾವಣಿಯನ್ನು ತಯಾರಿಸಲಾಯಿತು. ಅದರಲ್ಲಿ ಸಣ್ಣ ಕಂಡಿಗಳನ್ನು ಮತ್ತು ಕೈಸಾಲೆಗಳನ್ನು (Balcony) ಮಾಡಲಾಗಿತ್ತು. ಇದು ಮಸ್ಜಿದ್ ನಬವಿಯಯಲ್ಲಿ ನರ್ಮಿಸಲಾದ ಮೊದಲ ಸುರಕ್ಷಾ ಕ್ರಮವಾಗಿತ್ತು. ಅನಂತರ ದಮಸ್ಕಸಿನಲ್ಲಿ ಬನೂ ಉಮೈಯದ ಖಲೀಫರ ಸಂರಕ್ಷಣೆಗಾಗಿ ಈ ರೀತಿಯನ್ನು ರೂಢಿ ಮಾಡಲಾಯಿತು. ಎಂದರೆ ಮಿಹ್ರಾಬನ್ನು ಗೋಡೆಗಳಿಂದ ಸುರಕ್ಷಿತಗೊಳಿಸಲಾಯಿತು. ಆದರೆ ಇಮಾಮಿನ ಹಿಂದೆ ಇರುವವರು ಇಮಾಮನ್ನು ನೋಡುಬಹುದಾಗಿತ್ತು. ಹೇಗಿದ್ದರೂ ಅನಂತರ ಬೇರೆ ಬೇರೆ ಕಾಲದಲ್ಲಿ ಮಸೀದಿಯನ್ನು ವಿಸ್ತರಿಸಲಾಗಿತ್ತು. (ಜುಸ್ತಜೂ ಎ ಮಸದೀನ, ಅಬ್ದುಲ್ ಹಮೀದ್ ಖಾರಿ, ಪುಟ–463–465, ಓರಿಎಂಟಲ್ ಪಬ್ಲಿಕೇಶನ್ಸ್ ಪಾಕಿಸಾನ 2007) (ಉರ್ದು ಲುಗತ್ ತಾರೀಖಿ ಉಸೂಲೋಂ ಪರ್ ಸಂಪುಟ–18, ಪುಟ–492)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಹಝ್ರತ್ ಉಸ್ಮಾನ್‌ರನ್ನು ಹಝ್ರತ್ ಸುಲೈಮಾನ್‌ರಿಗೆ ಹೋಲಿಸುತ್ತೇನೆ. ಅವರಿಗೂ ಕಟ್ಟಡ ನಿರ್ಮಾಣದ ಆಸಕ್ತಿಯಿತ್ತು. ಹಝ್ರತ್ ಅಲಿಯ ಕಾಲದಲ್ಲಿ ಆಂತರಿಕ ಪಿತೂರಿ ಖಂಡಿತವಿತ್ತು. ಒಂದು ಕಡೆ ಮುಆವಿಯ ಇದ್ದರು. ಮತ್ತೊಂದು ಕಡೆ ಹಝ್ರತ್ ಅಲಿ. ಫಿತ್ನದ ಕಾರಣದಿಂದ ಮುಸ್ಲಿಮರ ರಕ್ತ ಸುರಿಯಿತು. ಆರು ವರ್ಷಗಳಲ್ಲಿ ಇಸ್ಲಾಮಿನಲ್ಲಿ ಯಾವುದೇ ಕೆಲಸ ನಡೆಯಲಿಲ್ಲ. ಇಸ್ಲಾಮಿನ ಎಲ್ಲ ಕಾರ್ಯಚರಣೆಗಳು ಉಸ್ಮಾನ್‌ರ ಕಾಲದಲ್ಲೇ ಮುಕ್ತಾಯವಾಯಿತು. ಅನಂತರ ಆಂತರಿಕ ಯುದ್ಧ ಶುರುವಾಯಿತು.  (ಮಲ್‌ಫೂಝಾತ್ ಸಂಪುಟ–8, ಪುಟ–278)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮಸೀದಿ ಅಲಂಕರಿಸಲ್ಪಟ್ಟಿರಬೇಕು ಮತ್ತು ಇಟ್ಟಿಗೆಯಿಂದ ಅಥವಾ ಕಲ್ಲಿನಿಂದಲೇ ಕಟ್ಟಿರಬೇಕೆಂದೇನೂ ಇಲ್ಲ. ಮಸೀದಿಯ ವಿಸ್ತೀರ್ಣವನ್ನು ಲೆಕ್ಕದಲ್ಲಿಟ್ಟುಕೊಂಡು ಬಿದಿರು ಇತ್ಯಾದಿಗಳ ಚಪ್ಪರವನ್ನು ಹಾಕಿದರೆ, ಮಳೆ ಇತ್ಯಾದಿಗಳಿಂದ ರಕ್ಷಣೆ ಪಡೆಯಬಹುದು. ಅಲ್ಲಾಹನು ಔಪಚಾರಿಕತೆಯನ್ನು ಇಷ್ಟಪಡುವುದಿಲ್ಲ. ಹಝ್ರತ್ ಪೈಗಂಬರರ(ಸ) ಮಸೀದಿ ಖರ್ಜೂರದ ಕೆಲವು ಕೊಂಬೆಗಳದ್ದಾಗಿತ್ತು. ಅದು

ಹಾಗೆಯೇ ಮುಂದುವರೆಯಿತು. ಅನಂತರ ಹಝ್ರತ್ ಉಸ್ಮಾನ್‌ರಿಗೆ ಕಟ್ಟಡ ನಿರ್ಮಾಣದ ಅಭಿರುಚಿಯಿತ್ತು. ಆದ್ದರಿಂದ ತನ್ನ ಕಾಲದಲ್ಲಿ ಅದನ್ನು ಇಟ್ಟಿಗೆಯಿಂದ ಕಟ್ಟಿ ಗಟ್ಟಿಗೊಳಿಸಿದರು. ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಸುಲೈಮಾನ್‌ರ ನಡುವೆ ಬಹಳ ಗುಣ ಸಾಮ್ಯತೆ ಇದೆ ಎಂದು ನನಗೆ ಅನಿಸುತ್ತಿರುತ್ತದೆ. ಬಹುಶಃ ಇದೇ ಹೊಂದಾಣಿಕೆಯ ಕಾರಣದಿಂದ ಅವರಿಗೂ ಇದರ ಆಸಕ್ತಿ ಇದ್ದಿರಬೇಕು. (ಮಲ್‌ಫೂಝಾತ್ ಸಂಪುಟ–7, ಪುಟ–119)

ಮಸ್ಜಿದುಲ್ ಹರಾಮಿನ ವಿಸ್ತರಣೆ ಹಿಜರೀ 26ರಲ್ಲಿ ನಡೆಯಿತು. ಹಝ್ರತ್ ಉಸ್ಮಾನ್(ರ) ಮಸ್ಜಿದ್ ಹರಾಮನ್ನು ಅಡಿಪಾಯದಿಂದ ಪುನರ್ನಿರ್ಮಾಣಗೊಳಿಸಿದರು. ಮಸ್ಜಿದ್ ಹರಾಮನ್ನು ವಿಸ್ತಾರಗೊಳಿಸಿದರು. ಆಸುಪಾಸಿನ ಮನೆಗಳನ್ನು ಖರೀದಿಮಾಡಿಕೊಂಡು ಮಸ್ಜಿದುಲ್ ಹರಾಮಿನಲ್ಲಿ ಸೇರ್ಪಡೆ ಮಾಡಿದರು. ಕೆಲವರು ಸ್ವಂತ ಇಷ್ಟ ಪ್ರಕಾರ ತಮ್ಮ ಮನೆಗಳನ್ನು ಮಾರಾಟ ಮಾಡಿದರು. ಆದರೆ ಕೆಲವರು ತಮ್ಮ ಮನೆಗಳನ್ನು ಮಾರಾಟ ಮಾಡಲು ತಯಾರಾಗಲಿಲ್ಲ. ಹಝ್ರತ್ ಉಸ್ಮಾನ್(ರ) ಅವರನ್ನು ಸಮ್ಮತಿಸಲು ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಿದರು. ಆದರೆ ಅವರು ತಮ್ಮ ನಿಲುವಿನಲ್ಲೇ ನೆಲೆನಿಂತರು. ಕೊನೆಗೆ ಹಝ್ರತ್ ಉಸ್ಮಾನ್‌ರ ಆದೇಶ ಪ್ರಕಾರ ಎಲ್ಲ ಮನೆಗಳನ್ನು ಬೀಳಿಸಲಾಯಿತು. ಅದರ ಬೆಲೆಯನ್ನು ಅವರು ಬೈತುಲ್ ಮಾಲಿನಲ್ಲಿ ಹಾಕಿದರು. ಆಗ ಆ ಜನರು ಹಝ್ರತ್ ಉಸ್ಮಾನ್‌ರ ವಿರುದ್ಧ ಗಲಾಟೆ ಮಾಡಲು ಶುರುಮಾಡಿದರು. ಹೀಗೆ ಅವರು ಅವರನ್ನೆಲ್ಲ ಬಂಧಿಸಿ ಸೆರೆಮನೆಗೆ ಕಳುಹಿಸಲು ಆಜ್ಞಾಪಿಸಿದರು. ಅನಂತರ ಅವರನ್ನು ಸಂಬೋಧಿಸಿ ಹೇಳಿದರು: ನನ್ನ ವಿರುದ್ಧ ನಿಲ್ಲಲು ನಿಮಗೆ ಧೈರ್ಯ ಉಂಟಾಗಲು ಕಾರಣವೇನೆಂದು ನಿಮಗೆ ಗೊತ್ತೇ? ಅದರ ಕಾರಣ ನನ್ನ ತಾಳ್ಮೆಯಾಗಿದೆ. ಹಝ್ರತ್ ಉಮರ್ ಸಹ ನಿಮ್ಮೊಡನೆ ಹೀಗೆ ಮಾಡಿದ್ದರು. ಆದರೆ ನೀವು ಅವರ ವಿರುದ್ಧ ಯಾವುದೇ ರೀತಿಯ ಗದ್ದಲ ಮಾಡಿರಲಿಲ್ಲ. ಅನಂತರ ಹಝ್ರತ್ ಉಸ್ಮಾನ್‌ರೊಡನೆ ಅಬ್ದುಲ್ಲಾಹ್ ಬಿನ್ ಖಾಲಿದ್ ಬಿನ್ ಉಸೈದ್ ಕೋಲಾಹಲ ಮಾಡಿದವರ ಕುರಿತು ಮಾತುಗಾರಿಕೆ ನಡೆಸಿಕೊಂಡು ಅವರನ್ನು ಬಿಡುಗಡೆಗೊಳಿಸಿದರು. (ತಾರೀಖ್ ಅತ್ತಿಬರಿ, ಸಂಪುಟ–5, ಪುಟ–92, ದಾರುಲ್ ಫಿಕರ್ ಬೈರೂತ್ 2002)

ಇಸ್ಲಾಮಿನ ಮೊದಲ ನಾವಿಕಪಡೆ ಹಿಜರೀ 28ರಲ್ಲಿ ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಮಾಡಲಾಗಿತ್ತು. ಹಝ್ರತ್ ಉಸ್ಮಾನ್‌ರ ಖಿಲಾಫತ್ ಕಾಲದಲ್ಲಿ, ನೌಕಾ ಯುದ್ಧ ನಡೆಸಿದ ಮೊದಲ ವ್ಯಕ್ತಿ ಅಮೀರ್ ಮುಆವಿಯಾ ಆಗಿದ್ದರು. ನಾವಿಕ ಯುದ್ಧವನ್ನು ಮಾಡಲು ಹಝ್ರತ್ ಉಮರರೊಡನೆ ಸಹ ಅಮೀರ್ ಮುಆವಿಯ ಅನುಮತಿ ಕೇಳಿದ್ದರು. ಆದರೆ ಅವರು ಅದಕ್ಕೆ ಅನುಮತಿ ಕೊಟ್ಟಿರಲಿಲ್ಲ. ಹಝ್ರತ್ ಉಸ್ಮಾನ್(ರ) ಖಲೀಫರಾದಾಗ, ಅಮೀರ್ ಮುಆವಿಯ ಅವರೊಡನೆ ಸಹ ಪದೇ ಪದೇ ಇದರ ಬಗ್ಗೆ ಹೇಳುತ್ತಿದ್ದರು. ಅನುಮತಿಯನ್ನು ಕೇಳುತ್ತಿದ್ದರು. ಕೊನೆಗೆ ಹಝ್ರತ್ ಉಸ್ಮಾನ್(ರ) ಅನುಮತಿ ಕೊಟ್ಟು ಹೀಗೆ ಹೇಳಿದರು: ನಾವಿಕ ಪಡೆಗಾಗಿ ನೀನು ಸ್ವತಃ ಜನರನ್ನು ಆಯ್ಕೆ ಮಾಡಬೇಡ, ಚೀಟಿ ಎತ್ತುವುದರ ಮೂಲಕವೂ ಆಯ್ಕೆ ಮಾಡಬೇಡ. ಬದಲಾಗಿ, ಅದರ ತೀರ್ಮಾನವನ್ನು ಜನರಿಗೆ ಬಿಟ್ಟುಕೊಡು. ಯಾರು ಸ್ವಂತ ಖುಶಿಯಿಂದ ಈ ಯುದ್ಧದಲ್ಲಿ ಬರಲು ಇಷ್ಟಪಡುತ್ತಾರೋ ಅವರನ್ನು ಕೊಂಡುಹೋಗು ಮತ್ತು ಅವರಿಗೆ ಸಹಾಯ ಮಾಡು. ಅಮೀರ್ ಮುಆವಿಯ ಹಾಗೆಯೇ ಮಾಡಿದರು. ಅವರು ಅಬ್ದುಲ್ಲಾಹ್ ಬಿನ್ ಖೈಸ್‌ರಿಗೆ ನಾವಿಕಪಡೆಯ ನೇತೃತ್ವವನ್ನು ವಹಿಸಿಕೊಟ್ಟರು. ಅವರು ಸಮುದ್ರದಲ್ಲಿ ಚಳಿಗಾಲ ಮತ್ತು ಬೇಸಿಗೆಗಾಲದಲ್ಲಿ 50 ಯುದ್ಧಗಳನ್ನು ಮಾಡಿದರು. ಈ ಎಲ್ಲ ಯುದ್ಧಗಳಲ್ಲೂ ಮುಸ್ಲಿಮರ ಯಾವನೇ ಸೈನಿಕ ಮುಳುಗಿ ಮೃತಪಟ್ಟಿರಲೂ ಇಲ್ಲ. ಬೇರೆ ಯಾವುದೇ ರೀತಿಯ ನಷ್ಟವೂ ಮುಸ್ಲಿಮರಿಗೆ ಉಂಟಾಗಿರಲಿಲ್ಲ. (ತಾರೀಖ್ ಅತ್ತಿಬರಿ, ಸಂಪುಟ–5, ಪುಟ–97, ದಾರುಲ್ ಫಿಕರ್ ಬೈರೂತ್ 2002)

ಸ್ವಭಾವಗುಣಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆ ಹಝ್ರತ್ ಉಸ್ಮಾನ್‌ರಿಗೆ ಇತ್ತು ಎಂದು ವರದಿಗಳಲ್ಲಿ ಬರುತ್ತವೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಉಸ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ಮಗಳ ಬಳಿಗೆ ಹೋದರು. ಆ ಸಮಯದಲ್ಲಿ ಅವರು ಹಝ್ರತ್ ಉಸ್ಮಾನ್‌ರ ತಲೆಯನ್ನು ತೊಳೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ನನ್ನ ಮಗಳೇ, ಅಬೂ ಅಬ್ದುಲ್ಲಾಹ್, ಎಂದರೆ ಉಸ್ಮಾನ್‌ರೊಂದಿಗೆ ಉತ್ತಮವಾಗಿ ವರ್ತಿಸು, ಏಕೆಂದರೆ ಅವರು ನನ್ನ ಸಹಾಬರಲ್ಲಿ ಸ್ವಭಾವಗುಣಗಳ ದೃಷ್ಟಿಯಲ್ಲಿ ನನ್ನೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆಯನ್ನು ಹೊಂದಿರುವರು. (ಮಜ್‌ಮ ಅಝ್ಝುವಾಎದ್ ವ ಮಂಬಅ ಅಲ್‌ಫವಾಎದ್, ಪುಟ–58, ಕಿತಾಬುಲ್ ಮನಾಖಿಬ್, ಹದೀಸ್–14500, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಯಹ್ಯಾ ಬಿನ್ ಅಬ್ದುರ್ರಹ್ಮಾನ್ ಬಿನ್ ಹಾತಿಬ್ ವರದಿ ಮಾಡುತ್ತಾರೆ: ನನ್ನ ತಂದೆ ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಮಾತುಗಳನ್ನು ಸಂಪೂರ್ಣವಾಗಿಯೂ ಸುಂದರವಾಗಿಯೂ ಹೇಳುವುದರಲ್ಲಿ ಹಝ್ರತ್ ಉಸ್ಮಾನ್‌ರಿಗಿಂತ ಉತ್ತಮವಾಗಿ ನಾನು ಯಾರನ್ನೂ ಕಂಡಿಲ್ಲ. ಆದಾಗ್ಯೂ ಅವರು ಹೆಚ್ಚು ಮಾತನಾಡುವುದರಿಂದ ದೂರವಿರುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–32, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ: ನಾನು ಹಝ್ರತ್ ಉಸ್ಮಾನ್‌ರ ಪತ್ನಿಯಾದ ಹಝ್ರತ್ ಪೈಗಂಬರರ(ಸ) ಮಗಳ ಬಳಿಗೆ ಹೋದೆ. ಅವರ ಕೈಯಲ್ಲಿ ಬಾಚಣಿಕೆ ಇತ್ತು. ಅವರು ಹೇಳಿದರು: ಈಗಷ್ಟೆ ಹಝ್ರತ್ ಪೈಗಂಬರ್(ಸ) ಇಲ್ಲಿಂದ ಹೋಗಿರುವರು. ನಾನು ಅವರ ತಲೆಯನ್ನು ಬಾಚಿದೆ. ಆಗ ಹಝ್ರತ್ ಉಸ್ಮಾನ್‌ರನ್ನು ಹೇಗೆ ಕಾಣುತ್ತೀ ಎಂದು ಅವರು ನನ್ನೊಡನೆ ಕೇಳಿದರು. ಬಹಳ ಉತ್ತಮ ಎಂದು ನಾನು ಹೇಳಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ನೀನು ಸಹ ಅವರೊಡನೆ ಗೌರವಭಾವದಿಂದ ವರ್ತಿಸು. ಏಕೆಂದರೆ, ಅವರು ನನ್ನ ಸಹಾಬರಲ್ಲಿ ಸ್ವಭಾವಗುಣಗಳ ದೃಷ್ಟಿಯಲ್ಲಿ ನನ್ನೊಂದಿಗೆ ಅತ್ಯಂತ ಹೆಚ್ಚು ಸಾಮ್ಯತೆಯನ್ನು ಹೊಂದಿರುವರು. (ಮಜ್‌ಮ ಅಝ್ಝುವಾಎದ್ ವ ಮಂಬಅ ಅಲ್‌ಫವಾಎದ್, ಪುಟ–58, ಕಿತಾಬುಲ್ ಮನಾಖಿಬ್, ಹದೀಸ್–14501, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ನಾನು ಹಝ್ರತ್ ಉಸ್ಮಾನ್‌ರ ಪ್ರಸ್ತಾಪವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ. ಇಂದು ಸಹ ನಾನು ಕೆಲವು ಜನಾಝಗಳ ಬಗ್ಗೆ ಪ್ರಸ್ತಾಪಿಸುತ್ತೇನೆ.

ಮೊದಲ ಜನಾಝ ಅಹ್ಮದ್ ಬಖ್ಷ್ ಸಾಹಿಬ್‌ರ ಮಗನಾದ ಮುಬಶ್ಶಿರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ವಖ್ಫ್ ಜದೀದ್ ರಬ್ವದ ಮುಅಲ್ಲಿಂ ಆಗಿದ್ದರು. ಮಾರ್ಚ್ 10ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಡೇರ ಗ್ಾಝಿಖಾನ್ ಜಿಲ್ಲೆಯ ರಂದಾನ್ ಗ್ರಾಮದವರಾಗಿದ್ದರು. ಜನ್ಮತಃ ಅಹ್ಮದಿಯಾಗಿದ್ದರು. 1990ರಲ್ಲಿ ಥರ್‌ಪಾರ್ಕರ್‌ನಿಂದ ವಖ್ಫೆ ಜದೀದಿನ ಮುಅಲ್ಲಿಂ ಆಗಿ ಸೇವೆ ಸಲ್ಲಿಸಲು ತೊಡಗಿದರು. ಅನಂತರ ವಿವಿಧ ಸಮಯಗಳಲ್ಲಿ ಹಲವು ಸ್ಥಳಗಳಲ್ಲಿ ಮುಅಲ್ಲಿಂ ಮತ್ತು ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡಿದರು. ಅವರನ್ನು ಎಲ್ಲಿಗೆ ಕಳುಹಿಸಿದ್ದರೂ ಸದಾ ಅದಕ್ಕೆ ತಯಾರಿರುತ್ತಿದ್ದರು. ಎಂದಿಗೂ ನೆಪಗಳನ್ನು ಹೇಳುತ್ತಿರಲಿಲ್ಲ. ವಖ್ಫ್‌ನ್ನು ಸದಾ ನಿಷ್ಠೆಯಿಂದ ನಿರ್ವಹಿಸಲು ಪ್ರಯತ್ನಿಸಿದ್ದರು. ಅತ್ಯಂತ ಪರಿಶ್ರಮಿ, ದುಆ ಮಾಡುವ, ನಿಯತವಾಗಿ ತಹಜ್ಜುದ್ ನಿರ್ವಹಿಸುವ ಅತ್ಯುತ್ತಮ ಧರ್ಮ ಪ್ರಚಾರಕರಾದ, ಉತ್ತಮ ಭಾಷಣಗಾರರಾದ, ಸ್ನೇಹಮಯಿ, ಅತಿಥಿ ಸತ್ಕಾರ ಮಾಡುವ, ಹಸನ್ಮುಖಿರಾದ, ವಿನಯವಂತರಾದ ವ್ಯಕ್ತಿಯಾಗಿದ್ದರು ಎಂದು ಅವರ ಬಗ್ಗೆ ಸ್ವಂತ ಮತ್ತು ಪರ ಜನರು ಹೇಳಿದ್ದಾರೆ. ಸದಾ ಸೌಮ್ಯವಾಗಿ ಮತ್ತು ಮಧುರವಾಗಿ ಮಾತನಾಡುವ ವ್ಯಕ್ತಿಯಾಗಿದ್ದರು. ಆದರೆ ಜಮಾಅತಿನ ವ್ಯವಸ್ಥೆ ಮತ್ತು ಖಿಲಾಫತ್‌ನ ವಿರುದ್ಧ ಏನಾದರೂ ಆಲಿಸಿದರೆ, ತೆರೆದ ಖಡ್ಗದಂತಾಗುತ್ತಿದ್ದರು. ಹೀಗೆ ಹೇಳುವ ವ್ಯಕ್ತಿಯ ಸುಧಾರಣೆ ಮಾಡುವ ತನಕ ಆ ಸಭೆಯಿಂದ ಅವರು ಎದ್ದೇಳುತ್ತಿರಲಿಲ್ಲ. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರು ಕಿರಿಯ ಮಗನಾದ ಶಾಜಿಲ್ ಅಹ್ಮದ್ ಜಾಮಿಅ ಅಹ್ಮದಿಯಾ ರಬ್ವದ ಮೂರನೇ ದರ್ಜೆಯ ವಿದ್ಯಾರ್ಥಿಯಾಗಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಇಸ್ಲಾಮಾಬಾದ್ ಜಿಲ್ಲೆಯ ಮಾಜಿ ಅಮೀರ್ ಜಮಾಅತಾದ ಮುನೀರ್ ಅಹ್ಮದ್ ಫರಖ್ ಸಾಹಿಬ್‌ರದ್ದಾಗಿದೆ. ದೀರ್ಘಕಾಲದ ರೋಗಾವಸ್ಥೆಯ ನಂತರ ಮಾರ್ಚ್ 9ರಂದು ಕೆನಡದಲ್ಲಿ 84ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು 1/9 ಭಾಗದ ವಸಿಯ್ಯತ್ ಮಾಡಿದ ವ್ಯಕ್ತಿಯಾಗಿದ್ದರು. ಇಂಜಿನಿಯರ್ ಮುನೀರ್ ಅಹ್ಮದ್ ಫರಖ್ ಸಾಹಿಬ್‌ರ ತಾತರ ಹೆಸರು ಹಝ್ರತ್ ಮುನ್ಶಿ ಅಹ್ಮದ್ ಬಖ್ಷ್ ಸಾಹಿಬ್ ಎಂದಾಗಿತ್ತು. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಅವರು ಖಾದಿಯಾನಿಗೆ ಬಂದು 1903ರಲ್ಲಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ಮುನೀರ್ ಸಾಹಿಬ್‌ರ ತಂದೆಯ ಹೆಸರು ಡಾಕ್ಟರ್ ಚೌಧರಿ ಅಬ್ದುಲ್‌ಅಹದ್ ಸಾಹಿಬ್ ಎಂದಾಗಿತ್ತು. ಅವರು ಅಗ್ರಿಕಲ್ಚರ್‌ನಲ್ಲಿ ಎಂ.ಎಸ್.ಸಿ. ಮತ್ತು ಪಿ.ಎಚ್.ಡಿ. ಮಾಡಿದ್ದರು. ಆ ಕಾಲದಲ್ಲಿ ಪಿ.ಎಚ್.ಡಿ. ಮಾಡುವುದು ಬಹಳ ಬುದ್ಧಿವಂತ ವಿದ್ಯಾರ್ಥಿಗಳ ಕೆಲಸವಾಗಿತ್ತು. ಅವರು ಸ್ವಲ್ಪ ಕಾಲ ಲೈಲ್‌ಪೂರ್ ಜಮಾಅತಿನ ಅಮೀರ್ ಆಗಿ ಸೇವೆ ಸಲ್ಲಿಸಿದ್ದರು. 1944ರಲ್ಲಿ, ಅಹ್ಮದಿ ಯುವಕರೊಡನೆ, ವಿಶೇಷವಾಗಿ ವಿಜ್ಞಾನಿಗಳೊಡನೆ ಧರ್ಮದ ಸೇವೆಗಾಗಿ ವಖ್ಫ್ ಮಾಡಲು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಮನವಿ ಮಾಡಿದಾಗ, ಮುನೀರ್ ಫರಖ್ ಸಾಹಿಬ್‌ರ ತಂದೆ ಸಹ ವಖ್ಫ್ ಮಾಡಿದ್ದರು. ಸರ್ಕಾರಿ ನೌಕರಿಯನ್ನು ಬಿಟ್ಟು ಕುಟುಂಬ ಸಮೇತ ಖಾದಿಯಾನಿಗೆ ಸ್ಥಳಾಂತರಗೊಂಡರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ನೇರ ಮೇಲ್ನೋಟದಲ್ಲಿ ಫಝ್ಲ್ ಉಮರ್ ರಿಸರ್ಚ್ ಇನ್ಸ್ಟಿಟ್ಯೂಟ್

ಸ್ಥಾಪನೆಗೊಂಡಿತ್ತು. ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿ(ರ) ಅವರನ್ನು ಫಝ್ಲೆ ಉಮರ್ ರಿಸರ್ಚ್ ಇನ್ಸ್ಟಿಟ್ಯೂಟ್‌ನ ಡೈರೆಕ್ಟರ್ ಆಗಿ ನೇಮಿಸಿದರು. ಅದರೊಂದಿಗೆ ತಾಲೀಮುಲ್ ಇಸ್ಲಾಂ ಕಾಲೇಜ್‌ನಲ್ಲಿ ಸೈನ್ಸ್ ಟೀಚರ್ ಆಗಿಯೂ ನಿಶ್ಚಯಿಸಲ್ಪಟ್ಟರು.

ಫರಖ಼್ ಸಾಹಿಬ್‌ರು ಯೂನಿವರ್ಸಿಟಿ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನೋಲಜಿಯಿಂದ ಇಂಜಿನಿಯರಿಂಗ್‌ನ ಡಿಗ್ರಿ ಪಡೆದರು ಮತ್ತು ಹಲವಾರು ಸ್ಥಳಗಳಲ್ಲಿ ಆರಂಭದಲ್ಲಿ ಕೆಲಸ ಮಾಡಿದರು. ಅನಂತರ ಪಾಕಿಸ್ತಾನ ಸರ್ಕಾರದ ಟೆಲಿಗ್ರಾಫ್ ಎಂಡ್ ಟೆಲಿಫೋನ್ ಡಿಪಾರ್ಟ್‌ಮೆಂಟ್‌ನಲ್ಲಿ ಸರ್ವಿಸ್ ಆರಂಭಿಸಿದರು. ಸರ್ವಿಸ್ ಕಾಲದಲ್ಲಿ ಅವರು ದೇಶದ ಬಹುತೇಕ ಪಟ್ಟಣಗಳಲ್ಲಿ ಸೇವೆಗಳನ್ನು ಮಾಡಿದರು. ಹಲವಾರು ದೇಶಗಳಲ್ಲಿ ಪಾಕಿಸ್ತಾನ ಸರ್ಕಾರದ ಪ್ರಾತಿನಿಧ್ಯವನ್ನು ವಹಿಸಿದರು. 1997ರಲ್ಲಿ, ಪಾಕಿಸ್ತಾನದ ಟೆಲಿಫೋನ್ ಕಮ್ಯುನಿಕೇಶನ್ ಲಿಮಿಟಡ್‌ನ ಡೈರೆಕ್ಟರ್ ಜನರಲ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ದಿವಂಗತರು ಪತ್ನಿಯನ್ನಲ್ಲದೆ, ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಅವರ ಮಕ್ಕಳಿಗೂ ಅವರ ಹೆಜ್ಜೆಗುರುತುಗಳನ್ನು ಹಿಂಬಾಲಿಸುವ ಸೌಭಾಗ್ಯವನ್ನು ನೀಡಲಿ.

ರಾವಲ್ಪಿಂಡಿಯಲ್ಲಿ ನೆಲೆಸಿದ್ದ ವೇಳೆ ಮಜ್ಲಿಸ್ ಖ಼ುದ್ದಾಮುಲ್ ಅಹ್ಮದಿಯಾದ ಜಿಲ್ಲಾ ಖಾಇದ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಅವರು ಪಡೆದಿದ್ದರು. ಅದು 1974ರ ವಿಷಮ ಪರಿಸ್ಥಿತಿಯ ಕಾಲವಾಗಿತ್ತು. 1977ರಲ್ಲಿ ಇಸ್ಲಾಮಾಬಾದಿನಲ್ಲಿ ಸ್ಥಿರವಾಸ ಮಾಡಿದ ನಂತರ ಹಲವು ರೀತಿಯ ಸೇವೆಗಳನ್ನು ಮಾಡುವ ಸೌಭಾಗ್ಯವನ್ನು ಪಡೆದರು. 1990ರಲ್ಲಿ ನಾಇಬ್ ಅಮೀರ್ ಅವ್ವಲ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಅನಂತರ ಅವರು ನಿವೃತರಾದಾಗ, ವಖ್ಫ್ ಸ್ವೀಕರಿಸಲು ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರ(ರಹ್) ಸನ್ನಿಧಿಯಲ್ಲಿ ಸ್ವತಃ ವಿನಂತಿಸಿದರು. ಅದು ಸ್ವೀಕರಿಸಲ್ಪಟ್ಟಿತು. ಅನಂತರ 1999ರಲ್ಲಿ ಇಸ್ಲಾಮಾಬಾದ್ ಪಟ್ಟಣದ ಮತ್ತು ಜಿಲ್ಲೆಯ ಅಮೀರ್ ಆಗಿ ಸೇವೆ ಸಲ್ಲಿಸುವ ಜವಾಬ್ದಾರಿ ಸಿಕ್ಕಿತು. ರಬ್ವದಲ್ಲಿ ಅವರ ಕೆಲಸವಾದ ಡೈರೆಕ್ಟ್ ಡೈಲಿಂಗ್‌ನ ಸೌಕರ್ಯವನ್ನು ಒದಗಿಸಲು ಅವರು ಡಿಜಿಟಲ್ ಎಕ್ಸ್‌ಚೇಂಜ್‌ನ ಸ್ಥಾಪನೆಯಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದರು. ಕೇಂದ್ರ ಫೈನನ್ಸ್ ಕಮಿಟಿಯ ಮೆಂಬರ್ ಆಗಿದ್ದರು. ಐಎಎಈಯ ಎಕ್ಸಿಕ್ಯೂಟಿವ್ ಮೆಂಬರ್ ಆಗಿದ್ದರು. ಹಲವು ವಿಭಾಗಗಳಲ್ಲಿ ಅವರಿಗೆ ಗೌರವಾರ್ಥವಾಗಿಯೂ ಅಲ್ಲದೆಯೂ ಸೇವೆ ಸಲ್ಲಿಸುವ ಸೌಭಾಗ್ಯ ಸಿಕ್ಕಿತ್ತು. 1996ರಲ್ಲಿ ಫಝ್ಲೇ ಉಮರ್ ಫೌಂಡೇಶನಿನ ಡೈರೆಕ್ಟರ್ ಆಗಿ ಅವರನ್ನು ಖ಼ಲೀಫತುಲ್ ಮಸೀಹ್ ರಾಬಿಅ್(ರ) ನಿಶ್ಚಯಿಸಿದರು. ಮರಣದ ವರೆಗೆ ಅವರು ಇದರಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದರು. 1980ರಲ್ಲಿ, ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್‌ರ ಕಾಲದಲ್ಲಿ, ರಬ್ವದ ಜಲ್ಸ ಸಾಲಾನದ ಸಂದರ್ಭದಲ್ಲಿ ವಿದೇಶದ ಅತಿಥಿಗಳಿಗಾಗಿ ಜಲ್ಸ ಸಾಲಾನದ ಭಾಷಣಗಳ ತರ್ಜುಮೆಯ ಸೌಲಭ್ಯವನ್ನು ಶುರುವಾಡಲಾಗಿತ್ತು. ಆಗ ಅಹ್ಮದಿ ಇಂಜಿನಿಯರ್‌ಗಳ ಒಂದು ಟೀಮ್‌ನ್ನು ತಯಾರು ಮಾಡಲಾಗಿತ್ತು. ಅದರಲ್ಲೂ ಅವರು ಬಹಳ ಪರಿಶ್ರಮದಿಂದ ಕೆಲಸಮಾಡಿದರು. ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಸೌಭಾಗ್ಯ ಪಡೆದರು. ಆ ಟೀಮಿನ ಮುಖ್ಯ ವ್ಯವಸ್ಥಾಪಕರು ಸಹ ಮುನೀರ್ ಫರಖ಼್ ಸಾಹಿಬ್‌ರೇ ಆಗಿದ್ದರು. 1984ರಲ್ಲಿ ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್(ರಹ್) ಇಂಗ್ಲಂಡ್‌ಗೆ ವಲಸೆಹೋದ ನಂತರ, ಇವರು ಯು.ಕೆ. ಜಲ್ಸ ಸಾಲಾನದಲ್ಲಿ ಪ್ರತಿ ವರ್ಷ ನಿಯತವಾಗಿ ಬರುತ್ತಿದ್ದರು ಮತ್ತು ಟ್ರಾನ್ಸ್‌ಲೇಶನಿನ ವ್ಯವಸ್ಥೆ ಮಾಡಿ ಜನರಿಗೆ ತಲುಪಿಸುವ ಕೆಲಸ ಅವರಿಗೆ ವಹಿಸಲಾಗುತ್ತಿತ್ತು. ಬಹಳ ಉತ್ತಮ ರೀತಿಯಲ್ಲಿ ಅವರು ಈ ಕೆಲಸವನ್ನು ಮಾಡಿದ್ದರು. ಬಹಳ ಪರಿಶ್ರಮದಿಂದ ಕೆಲಸಮಾಡುತ್ತಿದ್ದರು. ಅವರು ಅಮೀರ್ ಆದ ಕಾಲದಲ್ಲಿ ಇಸ್ಲಾಮಾಬಾದ್‌ನಲ್ಲೂ ಜಮಾಅತಿನ ಹಲವಾರು ಕಟ್ಟಡಗಳ ನಿರ್ಮಾಣವಾಗಿತ್ತು.

ಅವರ ಒಬ್ಬ ಮಗನು ಹೇಳುತ್ತಾನೆ: ಜಮಾಅತಿನ ಕೆಲಸಗಳಲ್ಲಿ ಉತ್ಸಾಹದಿಂದ ಭಾಗವಹಿಸಲು ಉಪದೇಶಿಸುತ್ತಿದ್ದರು. ಸರ್ಕಾರಿ ನೌಕರಿ ಮಾಡುತ್ತಿದ್ದರೂ ಜಮಾಅತಿನ ಕೆಲಸಗಳಲ್ಲಿ ಸದಾ ಮುಂದಿದ್ದರು. ನೌಕರಿಯಿಂದ ನೇರವಾಗಿ ಜಮಾಅತಿನ ಆಫೀಸಿಗೆ ಹೋಗುತ್ತಿದ್ದರು ಮತ್ತು ಜಮಾಅತಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು. ಪ್ರತಿ ವರ್ಷ ಜಲ್ಸ ಸಾಲಾನ ಯು.ಕೆ.ಗಾಗಿ ರಜೆಗಳನ್ನು ಉಳಿತಾಯ ಮಾಡಿ ಇರಿಸುತ್ತಿದ್ದರು. ಅಹ್ಮದಿಯಾದ ಕಾರಣದಿಂದ ಅವರ ಪೋಸ್ಟಿಂಗ್ ಬಹಳ ದೂರದ ಪ್ರದೇಶವಾದ ಡೇರ ಇಸ್ಮಾಈಲ್ ಖಾನಿನಲ್ಲಿ ಆಗಿತ್ತು. ಅವರನ್ನು ಪುನಃ ಇಸ್ಲಾಮಾಬಾದಿನಲ್ಲಿ ಪೋಸ್ಟಿಂಗ್ ಮಾಡದಿರಲು ಆ ಕಾಲದ ಪ್ರಧಾನಮಂತ್ರಿಯಾದ ಭುಟ್ಟೋ ಹೇಳಿದ್ದರು. ಆದರೆ ಅಲ್ಲಾಹನ ಕೃಪೆಯಿಂದ ಅವರ ಪೋಸ್ಟಿಂಗ್ ಪುನಃ ಇಸ್ಲಾಮಾಬಾದಿನಲ್ಲಿ ಆಗಿತ್ತು. ಅಲ್ಲಿಂದ ಅವರಿಗೆ ಹಲವಾರು ದೇಶಗಳಿಗೆ ಸರ್ಕಾರಿ ಪ್ರತಿನಿಧಿಯಾಗಿ ಹೋಗಲು ಸೌಭಾಗ್ಯ ಸಿಕ್ಕಿತು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ರಾವಲ್ಪಿಂಡಿ ಜಿಲ್ಲೆಯ ಮಾಜಿ ಅಮೀರ್ ಆಗಿದ್ದ ರಿಟೈರ್ಡ್ ಬ್ರಿಗೇಡಿಯರ್ ಮುಹಮ್ಮದ್ ಲತೀಫ್ ಸಾಹಿಬ್‌ರದ್ದಾಗಿದೆ. ಫೆಬ್ರವರಿ 28ರಂದು 77ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಬ್ರಿಗೇಡಿಯರ್ ಲತೀಫ್ ಸಾಹಿಬ್‌ರು ತನ್ನ ತಂದೆಯೊಂದಿಗೆ ಸುಮಾರು 1955ರಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಬ್ರಿಗೇಡಿಯರ್ ಸಾಹಿಬ್‌ರ ತಂದೆ 2000ದಲ್ಲಿ ನಿಧನರಾಗಿದ್ದರು. ಅನಂತರ ಅವರ ಕುಟುಂಬದಲ್ಲಿ ಬ್ರಿಗೇಡಿಯರ್ ಸಾಹಿಬ್‌ರು ಮಾತ್ರ ಅಹ್ಮದಿಯಾಗಿದ್ದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿಗೆ ಅವರ ಹೆಜ್ಜೆಗುರುತನ್ನು ಹಿಂಬಾಲಿಸಲು ಅಲ್ಲಾಹನ ಸೌಭಾಗ್ಯ ನೀಡಲಿ.

2000 ಇಸವಿಯಲ್ಲಿ ನಿವೃತರಾದ ನಂತರ ತನ್ನ ಎಲ್ಲ ಸಮಯವನ್ನು ಜಮಾಅತಿನ ಸೇವೆಗಳಿಗಾಗಿ ಖರ್ಚು ಮಾಡಿದರು. ರಾವಲ್ಪಿಂಡಿಯ ಜಿಲ್ಲಾ ಅಮೀರ್ ಮತ್ತು ಸೆಕ್ರಟರಿ ಉಮೂರೆ ಆಮ್ಮ ಆಗಿದ್ದರು. 2019ರಿಂದ 2021ರಲ್ಲಿ ಅವರ ಮರಣದ ತನಕ ರಾವಲ್ಪಿಂಡಿ ಜಿಲ್ಲೆಯ ಅಮೀರ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಸುಮಾರು 20 ವರ್ಷಗಳ ವರೆಗೆ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಬಹಳ ಸಹಾನುಭೂತಿ ಹೊಂದಿದ್ದ, ಬಡವರ ಬಗ್ಗೆ ಕಾಳಜಿ ವಹಿಸುತ್ತಿದ್ದ ಮತ್ತು ಜಮಾಅತಿನ ಸೇವೆಯನ್ನು ಅಲ್ಲಾಹನ ಕೃಪೆಯೆಂದು ಅರಿತುಕೊಂಡು ಮಾಡುವವರಾಗಿದ್ದರು. ತನ್ನ ಮಕ್ಕಳಿಗೂ ಇದನ್ನೇ ಉಪದೇಶಿಸುತ್ತಿದ್ದರು. ಕೊನೆಯ ತೀವ್ರ ರೋಗಾವಸ್ಥೆಯ ವೇಳೆಯೂ, ಜಮಾಅತಿನ ಸೇವೆಗಾಗಿ ಕೇಂದ್ರದಿಂದ ಹುದ್ದೇದಾರರಲ್ಲಿ ಯಾರೇ ಕರೆದರೂ ಬೇಗನೇ ಹೋಗುತ್ತಿದ್ದರು. ತನ್ನ ರೋಗದ ಪರಿವೆ ಮಾಡುತ್ತಿರಲಿಲ್ಲ. ಕ್ಯಾನ್ಸರ್ ಕಾಯಿಲೆಯಿತ್ತು. ಅದರೊಂದಿಗೆ ತನ್ನ ಚಿಕಿತ್ಸೆ ಸಹ ನಡೆಸುತ್ತಿದ್ದರು. ಹೀಗಿದ್ದರೂ ಸೇವೆಗಾಗಿ ಸದಾ ಹಾಜರಿರುತ್ತಿದ್ದರು. ಎಂದಿಗೂ ನಿರಾಕರಿಸುತ್ತಿರಲಿಲ್ಲ. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ಕಿರ್ಗಿಸ್ತಾನದ ಅಹ್ಮದಿಯಾದ ಸನ್ಮಾನ್ಯ ಕೊನೊಕ್‌ಬೇಕ್ ಉಮರ್ ಬೇಕವ್‌ರದ್ದಾಗಿದೆ. ಫೆಬ್ರವರಿ 22ರಂದು 67ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಕಿರ್ಗಿಸ್ತಾನದ ನ್ಯಾಶನಲ್ ಪ್ರೆಸಿಡೆಂಟ್ ಆದ ಇಲ್ಯಾಸ್ ಕುಬಟೋವ್ ಬರೆಯುತ್ತಾರೆ: ನನಗೆ ಸನ್ಮಾನ್ಯ ಕೋನೋಕ್ ಬೇಕ್ ಸಾಹಿಬ್‌ರೊಂದಿಗೆ 15ವರ್ಷಗಳಿಗಿಂತ ಹೆಚ್ಚು ಕಾಲದ ಸಂಬಂಧವಿದೆ. ದಿವಂಗತರು ಕಿರ್ಗಿಸ್ತಾನ ಜಮಾಅತಿನ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು.

ಅವರು 2000ರಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ದಿವಂಗತರು ಬಹಳ ನಿಷ್ಠಾವಂತ, ಪ್ರಾಮಾಣಿಕ ಅಹ್ಮದಿಯಾಗಿದ್ದರು. ಸದಾ ಜಮಾಅತಿನ ಪ್ರೋಗ್ರಾಮ್‌ಗಳಲ್ಲಿ ಭಾಗವಹಿಸುತ್ತಿದ್ದರು. ನಿಯತವಾಗಿ ಜಮಾಅತಿನ ಚಂದಾಗಳಲ್ಲಿ ಮತ್ತು ಇತರ ಆರ್ಥಿಕ ತ್ಯಾಗಗಳಲ್ಲಿ ಭಾಗಿಯಾಗುತ್ತಿದ್ದರು. ಸಮಯಕ್ಕೆ ಸರಿಯಾಗಿ ತಮ್ಮ ವಾಗ್ದಾನಗಳನ್ನು ಈಡೇರಿಸುತ್ತಿದ್ದರು. ಸಮಯಕ್ಕೆ ಸರಿಯಾಗಿ ಐದು ಹೊತ್ತಿನ ನಮಾಝ಼್‌ಗಳನ್ನು ನಿರ್ವಹಿಸುತ್ತಿದ್ದರು. ನಿಯತವಾಗಿ ತಹಜ್ಜುದ್ ಅನುಷ್ಠಿಸುತ್ತಿದ್ದರು. ಸೋವಿಯಟ್ ಯೂನಿಯನಿನ ಕಾಲಘಟ್ಟದಲ್ಲಿ, ತನ್ನ ಯೌವ್ವನದ ಕಾಲದಲ್ಲಿ ದೇಶದ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಮತ್ತು ಸ್ಥಾಪನೆಗಳಲ್ಲಿ ಮುಖ್ಯ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು ಮತ್ತು ತನ್ನ ಪ್ರಾಮಾಣಿಕತೆ, ಸಭ್ಯತೆ ಹಾಗೂ ಪರಿಶ್ರಮದ ಕಾರಣದಿಂದ ಬಹಳವಾಗಿ ಪ್ರಶಂಸಿಸಲ್ಪಡುತ್ತಿದ್ದರು. ಕೆಲಸ ಮಾಡದೇ ಇರುತ್ತಿದ್ದ ಜೀವಿತದ ಕೊನೆಯ ಕಾಲಗಳಲ್ಲಿ, ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರು. ವಿಶೇಷವಾಗಿ ಇಸ್ಲಾಮಿನ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರು. ಜಮಾಅತಿನ ಧಾರ್ಮಿಕ ಕೆಲಸಗಳ ಮೇಲೆ ಕಿರ್ಗಿಸ್ತಾನದಲ್ಲಿ ನಿರ್ಬಂಧ ಹೇರುವುದಕ್ಕೆ ಮುಂಚಿತವಾಗಿ ಅವರು ಜಮಾಅತಿನ ಪುಸ್ತಕಗಳನ್ನು ಮತ್ತು ಜಮಾಅತಿನ ಪವಿತ್ರ ಖುರ್‌ಆನಿನ ತರ್ಜುಮೆಯನ್ನು ನಿಯತವಾಗಿ ವಿತರಣೆ ಮಾಡುತ್ತಿದ್ದರು. ತನ್ನ ತಬ್ಲೀಗಿನ ಮೂಲಕ ಹಲವಾರು ಜನರಿಗೆ ಅಹ್ಮದಿಯ್ಯತಿನ ಸಂದೇಶ ತಲುಪಿಸಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ, ಏಳು ವರ್ಷದ ಮಗನನ್ನು ಅಗಲಿರುವರು. ಇವರು ದಿವಂಗತರ ಎರಡನೇ ಪತ್ನಿಯಾಗಿರುವರು. ಮೊದಲ ಪತ್ನಿಯನ್ನು ತಲಾಖ್ ಮಾಡಿದ್ದರು. ಅವರಿಗೂ ಯುವ ಮಕ್ಕಳಿದ್ದಾರೆ. ಬಹುಶಃ ಅವರು ಅಹ್ಮದಿಯಲ್ಲ. ಅಲ್ಲಾಹನು ಅವರಿಗೂ ಅಹ್ಮದಿಯ್ಯತ್ ಸ್ವೀಕರಿಸುವ ಸೌಭಾಗ್ಯ ನೀಡಲಿ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ರಶ್ಯನ್ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ತರ್ಜುಮೆ ಪ್ರಕಾಶನಗೊಂಡಾಗ, ಕೆಲವು ತಪ್ಪುಗಳನ್ನು ಅವರು ತಿದ್ದಿದ್ದರು. ಆಗ ಅವರೊಡನೆ ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಓದಿ ತಪ್ಪುಗಳನ್ನು ತಿದ್ದಲು ನಾನು ಹೇಳಿದೆ. ಅವರು ಹತ್ತು ಹದಿನೈದು ದಿನಗಳಲ್ಲಿ ಸಂಪೂರ್ಣ ಪವಿತ್ರ ಖುರ್‌ಆನಿನ ತರ್ಜುಮೆ ಓದಿಕೊಂಡು ತಪ್ಪುಗಳನ್ನು ತಿದ್ದಿದರು. ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ನಮಾಝ಼್‌ಗಾಗಿ ಅತ್ಯಂತ ಉತ್ತಮ ರೀತಿಯಲ್ಲಿ ವುಝೂ಼ ಮಾಡುತ್ತಿದ್ದರು. ಅವರು ನಮಾಝ಼್ ಅನುಷ್ಠಿಸುವುದನ್ನು ನೋಡಿದರೆ, ನಮಗೂ ಅವರಂತೆ ಆಗಲು ಬಯಕೆ ಉಂಟಾಗುತ್ತಿತ್ತು. ಸನ್ಮಾನ್ಯ ಅಝ್‌ಗೇಂಬಾ ಆತೂರ್ ಸಾಹಿಬ್‌ರು ಹೇಳುತ್ತಾರೆ: ಸತ್ಯವೇನೆಂದರೆ, ನೋಕ್ ಬೇಕ್ ಸಾಹಿಬ್‌ರೇ ನನಗೆ ಅಹ್ಮದಿಯ್ಯತ್ತಿನ

ಸಂದೇಶವನ್ನು ತಲುಪಿಸಿದ್ದರು. ಯಾವಾಗಲೆಲ್ಲ ಪ್ರಶ್ನೆ ಕೇಳಿದ್ದರೂ ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಅವರು ಅದಕ್ಕೆ ಉತ್ತರ ಕೊಡುತ್ತಿದ್ದರು. ಅವರ ಉತ್ತರಗಳು ತಾರ್ಕಿಕ, ಬುದ್ಧಿ ಮತ್ತು ಯುಕ್ತಿಯಿಂದ ಕೂಡಿದ್ದಾಗಿದ್ದುವು. ಸನ್ಮಾನ್ಯ ನೋಕ್ ಬೇಕ್ ಸಾಹಿಬ್‌ರು ಬಹಳ ಉನ್ನತ ಸ್ವಭಾವಗುಣಗಳನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಸಹನೆ ಮತ್ತು ತಾಳ್ಮೆ ಹೊಂದಿದ್ದ ವ್ಯಕ್ತಿಯಾಗಿದ್ದರು. ಅವರು ಸ್ವಭಾವಗುಣ ಮತ್ತು ಅವರ ವಿಶೇಷತೆಯ ಕಾರಣದಿಂದಲೇ ನಾನು ಅಹ್ಮದಿಯ್ಯತ್ ಪ್ರವೇಶಿಸಿದ್ದೆ. ಖಲೀಫತುಲ್ ಮಸೀಹರು ಉಪವಾಸ ಮಾಡಲು ಮತ್ತು ವಿಶೇಷ ಪ್ರಾರ್ಥನೆಗಳನ್ನು ಹೇಳಿದಾಗ ಅವರು ಸೋಮವಾರ ಮತ್ತು ಗುರುವಾರದಂದು ಉಪವಾಸ ಮಾಡುತ್ತಿದ್ದರು. ವಾರದಲ್ಲಿ ಒಂದು ದಿನ ಉಪವಾಸ ಮಾಡಲು ಅವರೊಡನೆ ಹೇಳಲ್ಪಡುವಾಗ, ಅವರು ಹೀಗೆ ಹೇಳುತ್ತಿದ್ದರು: ಖಿಲಾಫತಿನ ಪ್ರತಿ ಸ್ವರಕ್ಕೆ ಸನ್ನದ್ಧನಾಗುವ ವ್ಯಕ್ತಿಯಾಗಲಿಕ್ಕಾಗಿ ನಾನು ಸೋಮವಾರ ಮತ್ತು ಗುರುವಾರ ಎರಡೂ ದಿನಗಳು ಉಪವಾಸ ಇರಿಸುತ್ತೇನೆ. ಖಿಲಾಫತಿನ ಪ್ರೇಮಿಯಾಗಿದ್ದರು. ಖುತ್ಬ ಜುಮಾ ನಿಯತವಾಗಿ ರಶ್ಯನ್ ಭಾಷೆಯಲ್ಲಿ ಕೇಳುತ್ತಿದ್ದರು. ಬಹಳ ವಿನಯವಂತ, ಹಸನ್ಮುಖ ವ್ಯಕ್ತಿಯಾಗಿದ್ದರು. ಮೊದಲು ಹೇಳಿದಂತೆ ಬಹಳ ಆಸಕ್ತಿಯಿಂದ ತಬ್ಲೀಗ್ ಮಾಡುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅಲ್ಲಾಹನು ಎಲ್ಲ ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

***********************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇನ್ನೊಂದು ಅರ್ಥದಲ್ಲಿ ಸವಿವರವಾದ ಒಂದು ನೀಲಿನಕ್ಷೆಯುನ್ನು ತಯಾರಿಸಿಕೊಳ್ಳಬೇಕು.

4) ವಿಭಜನೆ ಹೊಂದದೆ ಏಕಕಾಲದಲ್ಲಿ ಎಲ್ಲ ಶಕ್ತಿಗಳನ್ನು ಕ್ರೂಢೀಕರಿಸಿ ಮುಂದುವರೆಯುವ ಪ್ರಯತ್ನ ಮಾಡಬೇಕು. ಆಗ ಶತ್ರುಗಳ ಮೇಲೆ ಜಯ ಸಾಧಿಸಬಹುದು.

5) ಶತ್ರುಗಳ ಮೇಲೆ ಹಲ್ಲೆ ಮಾಡಿದಾಗ ಅವರನ್ನು ಪ್ರತಿರೋಧಿಸಲು ಅವಕಾಶ ದೊರೆಯದಂತೆ ಮಾಡಬೇಕು. ಅಲ್ಲದಿದ್ದರೆ ಅವರು ಮರು ಬಲಪಡೆಯುವರು. ಆದುದರಿಂದ ಅವರ ಆಕ್ರಮಣಕ್ಕೆ ಹಿಂದೆಯೇ ಇನ್ನೊಂದು ಆಕ್ರಮಣಕ್ಕೆ ಸಜ್ಜಾಗಬೇಕು. ಎಲ್ಲ ಪ್ರವಾದಿಗಳು ಅದೇ ವಿಧಾನಗಳನ್ನು ಅನುಸರಿಸುತ್ತಿದ್ದರು. ಹಝ್‌ರತ್ ಮಸೀಹ್ ಮೌಊದ್(ಅ) ರವರ ವಿಧಾನವು ಅದೇ ಆಗಿತ್ತು. ಅವರು ಒಂದು ಜಾಹಿರಾತು ಹೊರಡಿಸುತ್ತಿದ್ದ ಬೆನ್ನಲ್ಲೇ ಇನ್ನೊಂದು ಜಾಹೀರಾತು ಹೊರಡಿಸುತ್ತಿದ್ದರು.

ಅಂತೂ ವಿಜಯ ಸಾಧಿಸಲು ಈ ಐದು ವಿದಾನಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಹಜ್‌ರತ್ ನೂಹ್(ಅ) ಸ್ವಯಂ ತನ್ನ ಸಮುದಾಯವನ್ನು ಇತ್ತ ಕಡೆ ಗಮನಸೆಳೆಯುತ್ತಿದ್ದರು ಮತ್ತು ಹೇಳುತ್ತಿದ್ದರು. ನೀವು ಈ ಐದು ವಿಧಾನಗಳನ್ನು ಅನುಸರಿಸಿದರೂ ವಿಜಯ ಪಡೆಯಲಾರಿರಿ. ಏಕೆಂದರೆ ಆರನೆಯ ವಿಧಾನವೊಂದಿದೆ ಅದನ್ನು ಅನುಸರಿಸದಿದ್ದರೆ ಎಲ್ಲ ವಿಧಾನಗಳು ವಿಫಲಗೊಳ್ಳುವುವು. ಅದು ಯಾವುದೆಂದರೆ "ಅಲ್ಲಾಹನ ಮೇಲೆ ಭರವಸೆಯಾಗಿದೆ. ಅದು ನಿಮ್ಮ ಬಳಿ ಇಲ್ಲ. ಬದಲು ನನ್ನ ಬಳಿಯಿದೆ. ಅದೇ ಕಾರಣದಿಂದ ನನಗೆ ಅಲ್ಲಾಹನ ಸಹಾಯ ದೊರೆಯುತ್ತದೆ. ಆದುದರಿಂದ ನೀವು ಎಷ್ಟಾದರೂ ಪ್ರಯತ್ನ ಮಾಡಿಕೊಳ್ಳಿರಿ. ನಾನೇ ವಿಜಯ ಸಾಧಿಸುವೆನು.

ಪ್ರವಾದಿಗಳಿಗೆ ತಮ್ಮ ಸತ್ಯಸಂಧತೆ ಮತ್ತು ಅಲ್ಲಾಹನ ವಾಗ್ದಾನಗಳ ಮೇಲೆ ದೃಢ ವಿಶ್ವಾಸವಿರುತ್ತದೆ. ಅವರು ಕೇವಲ ತನ್ನ ವಿರೋಧಿಗಳನ್ನು ಲೆಕ್ಕಿಸುವುದಿಲ್ಲ. ಬದಲು ಅವರನ್ನು ಇನ್ನಷ್ಟು ಉತ್ತೇಜಿಸುತ್ತಾರೆ. ಅದಾಗ್ಯೂ ಅವರು ತೃಪ್ತಿ ಹೊಂದಿ ಅಂತಿಮವಾಗಿ ನಾನೇ ಜಯಿಸುತ್ತೇನೆ ಎಂಬ ವಿಶ್ವಾಸವಿರುತ್ತದೆ. ಕೊನೆಗೆ ಹಾಗೆಯೇ ಆಗುವುದು. ಎಲ್ಲ ದೃಷ್ಟಾಂತಗಳನ್ನು ಹೊರತುಪಡಿಸಿದರೂ ವಾಸ್ತವ ತಿಳಿಯ ಬಯಸುವವರಿಗೆ ಇದೊಂದೇ ದೃಷ್ಟಾಂತ ಅವರು ಅಲ್ಲಾಹನ ಸತ್ಯಸಂಧರೆನ್ನಲು ಸಾಕಾಗಬಹುದು. ಆದರೆ ವಿಷಾದದ ಸಂಗತಿ ಎಂದರೆ ಈ ಕುರುಡು ಲೋಕವು ಲೆಕ್ಕಿಸುವುದಿಲ್ಲ. **(ತಫ್ಸೀರ್ ಕಬೀರ್ ಸಂಪುಟ 3, ಪುಟ 110, 111 , ಮುದ್ರಣ ಖಾದಿಯಾನ್ 2010)**

**ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಚಟಗಳು ಅದೆಲ್ಲ ಕಾರಣಗಳಿಂದಾಗಿ ನೊಣಗಳಂತೆ ಲೋಕದ ಮೇಲೆ ಬೀಳುವುದು, ಪರಲೋಕದ ಚಿಂತೆಯಿಲ್ಲ. ಕೇವಲ ಐಹಿಕ ಆಡಂಬರ ಮದ್ಯ ಸೇವನೆ ಸುಂದರ ವೇಶಭೂಷಣ, ರುಚಿಕರ ಆಹಾರ, ಐಶಾರಾಮಿಗಳದ್ದು, ಸಜ್ಜನರನ್ನು ಅವಮಾನಿಸುವುದು, ನಾವು ನೋಡುತ್ತಿದ್ದೇವೆ. ಐಶಾರಾಮ ಅವರ ಮಿತ್ರರಾಗಿದ್ದಾನೆ. ರಾತ್ರಿಯಲ್ಲಿ ಮದ್ಯಸೇವನೆ ಅವರ ಮನೋಬಿಲಾಷೆ, ಹೊಟ್ಟೆಪಾಡು ಅವರ ಧರ್ಮ, ಅಲ್ಲಾಹನ ಮಹಿಮೆಯನ್ನು ಅವರು ತುಂಬ ಧೈರ್ಯತನದಿಂದ ಮರೆತುಬಿಟ್ಟಿದ್ದಾರೆ. (ನೂರುಲ್ ಹಖ್, ರೂಹಾನಿ ಖಝಾಈನ್ ಸಂಪುಟ–8, ಪುಟ–48)

**ಸಂಪತ್ತು ಮತ್ತು ಐಶ್ವರ್ಯಕರ ಜೀವನದ ಆಸೆ**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅವರ ಇಸ್ಲಾಮ್ ಧರ್ಮವನ್ನು ತ್ಯಜಿಸುವ ಕಾರಣವನ್ನು ವಿವರಿಸುತ್ತಾ ನುಡಿದರು. ನಾವು ನಿಮ್ಮನ್ನು ದುಃಖ ಕೊಡುವವರಲ್ಲಿ ಮತ್ತು ಉಪದ್ರವ ನೀಡುವುದರಲ್ಲಿ ಆಸಕ್ತಿವಹಿಸಿದ್ದನ್ನು ನೋಡುತ್ತಿದ್ದೇವೆ. ನೀವು ಸಜ್ಜನರನ್ನು ಬಯ್ಯುತಿದ್ದೀರಿ. ಮತ್ತು ಸತ್ಯಸಂಧಕರ ಮೇಲೆ ಶಾಪ ಹಾಕುತ್ತಿದ್ದೀರಿ. ನೀವು ಅಹಂಕಾರ ಪಡುವವರಾಗಿದ್ದೀರಿ. ಆಟ ವಿನೋದಗಳಲ್ಲಿ ಮುಳುಗಿದ್ದೀರಿ. ಕ್ರೈಸ್ತರಾಗಲು ಇವೆ ನಿಮ್ಮ ಕಾರಣಗಳಾಗಿವೆ. ನೀವು ಕುದುರೆಗಳನ್ನು, ಅಸಂಖ್ಯಾತ ಸಂಪತ್ತನ್ನು ಉತ್ತಮ ವಸ್ತ್ರಗಳನ್ನು ಪಡೆದು ಜೀವನಾಧಾರಗಳಿಂದ ಮುಕ್ತವಾಗಬಯಸುತ್ತಿದ್ದೀರಿ. ಅವೆಲ್ಲ ದೊರೆತಾಗ ಮಾತ್ರ ನಿಮಗೆ ಆತ್ಮತೃಪ್ತಿ ದೊರೆಯುತ್ತದೆ. ನಿಮ್ಮ ನಯನಗಳು ತಂಪಾಗುತ್ತವೆ. ಅಂತು ಎಲ್ಲ ಐಹಿಕ ಸಂತೋಷಗಳೇ ನಿಮ್ಮ ಬಂಡವಾಳ ಆಗಿದೆ. (ನೂರುಲ್ ಹಖ್, ರೂಹಾನಿ ಖಝಾಈನ್ ಸಂಪುಟ–8, ಪುಟ–122)

**ಇಮಾದುದ್ದೀನ್ ಎಂತಹ ಮನುಷ್ಯನಾಗಿದ್ದ**

ಇಮಾದುದ್ದೀನ್ ಒಬ್ಬ ಸುಳ್ಳುಗಾರ ವಂಚಕ ಮತ್ತು ಕಿಡಿಗೇಡಿ ಮನುಷ್ಯನಾಗಿದ್ದ. ಸಯ್ಯದನಾ ಹಝ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ಈ ವ್ಯಕ್ತಿ ಮೂಢ ಮಾತ್ರವಲ್ಲ ಅರೆಬಿ ಭಾಷೆಯ ಬಗ್ಗೆ ಅಜ್ಞಾನಿಯಾಗಿದ್ದ. ಉದ್ದ ನಾಲಿಗೆಯನ್ನು ಬಿಟ್ಟರೆ ಅವನಲ್ಲಿ ಏನೂ ಅರ್ಹತೆ ಇರಲಿಲ್ಲ. ಅವನ ಪುಸ್ತಕಗಳಲ್ಲಿ ಬಯ್ಯುವುದು, ಬುರುಡೆಗಳನ್ನು ಬಿಟ್ಟರೆ ಏನೂ ಇರಲಿಲ್ಲ. ಸತ್ಯವನ್ನು ಮರೆಮಾಚಲು ಅವನಿಂದ ಸಾಧ್ಯವಾಗಲಿಲ್ಲ. ಯಾವುದೇ ನ್ಯೂನತೆಗಳನ್ನು ಸಹ ತೋರಿಸಲು ಸಾಧ್ಯವಾಗಲಿಲ್ಲ. ಅನ್ಯಮಾರ್ಗವಿಲ್ಲದೆ ಶತ್ರುಗಳಂತೆ ಅವಮಾನದತ್ತ ಧಾವಿಸಿದ ಅವನು ಬರೆದಂತಹ ಉದ್ರೇಕಕಾರಿ ಪುಸ್ತಕ ನಾನು ಎಂದೂ ನೋಡಲಿಲ್ಲ. ಅವನ ಪ್ರವಾಹ ರೂಪದ ಸುಳ್ಳು ಎಂದೂ ನೋಡಲಿಲ್ಲ. ಅವನ ಬಯ್ಗುಳಗಳಂತೆ ಯಾರ ಬೈಗಳು ಆಲಿಸಲಿಲ್ಲ. ಅವನಂತಹ ಮೋಸಗಾರ ಬೇರೊಬ್ಬನನ್ನು ಕಾಣಲಿಲ್ಲ. ಆದುದರಿಂದ ಅವನ ಪಿತೂರಿಗಳಿಂದ ಅಲ್ಲಾಹನ ಅಭಯವನ್ನು ಯಾಚಿಸುತ್ತೇವೆ. ಅವನೇ ಉತ್ತಮ ಸಹಾಯಕನಾಗಿದ್ದಾನೆ. ಅವನ ದುಷ್ಕೃತ್ಯಗಳಿಂದ ದೂರವಿರಬಯಸುವೆವು. ಅವನು ತನ್ನ ದುರ್ಮಾರ್ಗದಿಂದ ಸರಿಯುವಂತೆ ಕಾಣುವುದಿಲ್ಲ. ಇವೆಲ್ಲ ದಂಗೆಕೋರರ ಅಭ್ಯಾಸವಾಗಿದೆ. (ಅದೇ ಪುಟ 138)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಲ್ಲಾಹ್ ನಾವು ಹಝ್‌ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಹ್ವಾನ ಕುರಿತು ವಿವರಿಸುವೆವು. ಅದರಲ್ಲಿ ಅವರು ಇಮಾಮುದ್ದೀನನಿಗೆ ನೂರುಲ್ ಹಖ್ ಪ್ರತಿರೂಪ ಬರೆದರೆ ಐದು ಸಾವಿರ ರೂಪಾಯಿಗಳ ಬಹುಮಾನವನ್ನು ನಿಗದಿ ಮಾಡಿದರು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಅನ್ಯ ಗೋತ್ರಗಳೊಂದಿಗೆ ವಿವಾಹ**

**ಹಝ್‌ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

ಜನರು ತಂಗಬಹುದೆಂದು ವೀಕ್ಷಿಸಿದರು.

ಖಾಸಗಿ ಟೆಂಟ್‌ಗಳ ಒಂದು ಭಾಗದಲ್ಲಿ CARVAN ಅವರಿಗೆ ವಿಶೇಷವಾಗಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರ್ ಅಫ್ಸರ್ ಜಲ್ಸ ಸಾಲಾನ ಅವರಿಂದ ಈ ಕುರಿತು ಮತ್ತು ಅವರಿಗೆ ನೀಡಲಾದ ಸವಲತ್ತುಗಳ ಕುರಿತು ವರದಿ ಪಡೆದರು. ಆ Tent ಗಳ ಮತ್ತು CARVAN ನ ಅಕ್ಕಪಕ್ಕ Fan ಹಾಕಲಾಗಿತ್ತು. ಮತ್ತು Gate (ದ್ವಾರ) ಸಹ ನಿರ್ಮಿಸಲಾಗಿತ್ತು. ಈ ಕ್ಷೇತ್ರದಲ್ಲಿ ರಿಜಿಸ್ಟ್ರೇಷನ್ ಕಾರ್ಡ್‌ಗಳ checking ಮಾಡಿದ ನಂತರವೇ ದಾಖಲಾಗಬಹುದಿತ್ತು.

Tent ಗಳ ಈ ವಸತಿ ಭಾಗದ ವೀಕ್ಷಣೆಯ ನಡುವೆ ನೂರಾರು ಕುಟುಂಬಗಳು ತಮ್ಮ ಪ್ರೀತಿಯ ಇಮಾಮರನ್ನು ಸಮೀಪದಿಂದ ನೋಡಿದರು. ಪ್ರತಿಯೊಬ್ಬರು ತಮ್ಮ ಈ ಅದೃಷ್ಟದ ಬಗ್ಗೆ ಹೆಮ್ಮೆ ಪಟ್ಟುಕೊಂಡರು.

ಅನಂತರ ಹುಝೂರ್ 5 ಗಂಟೆ 50 ನಿಮಿಷಕ್ಕೆ ಲಜ್ನಗಳ ಸ್ಥಳಕ್ಕೆ ಆಗಮಿಸಿ ಲಜ್ನ ವಿಭಾಗಗಳನ್ನು ಪರಿಶೀಲಿಸಿದರು. ನಂತರ ಯುವಕರ ವಿಭಾಗಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು.

ಲಜ್ನ ಜಲ್ಸ ಸ್ಥಳ ವೀಕ್ಷಿಸಿದ ನಂತರ ಹುಝೂರ್ ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಜಲ್ಸ ಸಾಲಾನ ಕಾರ್ಯಕರ್ತರು, ಸಹಾಯಕರು ಬಗ್ಗೆ ಅಫ್‌ಸರ್ ಜಲ್ಸ ಸಾಲಾನ ಅತ್‌ಫೀ ಇಫ್ವ ರಾಸ್, ಅಫ್ಸರ್ ಖಿದ್‌ಮತ್ ಖಲ್ಫ್, ವಿವರಣೆ ನೀಡಿದರು.

**(ಮುಂದುವರಿಯುವುದು)**

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನಲ್ಲಿ ಎರಡನೇ ದರ್ಜೆಯ ಹುದ್ದೆಗಳಿಗಾಗಿ ಸೇವೆ ಮಾಡ ಬಯಸುವವರು ಗಮನಿಸಿ**

**ಶರತ್ತುಗಳು :** 1) ಅಭ್ಯರ್ಥಿಯ ವಯಸ್ಸು 25 ವರ್ಷಕ್ಕಿಂತ ಮೀರಿರಬಾರದು. (2) ಅಭ್ಯರ್ಥಿಯ ವಿದ್ಯಾರ್ಹತೆ ಕನಿಷ್ಠ 10,+2 ಆಗಿರಬೇಕು. (ಕನಿಷ್ಠ 45% ಅಂಕ ಪಡೆದಿರಬೇಕು.) (3) ಅಭ್ಯರ್ಥಿಯು ಉರ್ದು/ಇಂಗ್ಲೀಷ್ ಕಂಪೋಝಿಂಗ್ ತಿಳಿದರಬೇಕು. ವೇಗ ಒಂದು ನಿಮಿಷದಲ್ಲಿ 25 ಪದಗಳದ್ದಾಗಿರಬೇಕು. (4) ಈ ಜಾಹೀರಾತಿನ ನಂತರ ಎರಡು ತಿಂಗಳುಗಳ ಒಳಗೆ ಬರುವ ಅರ್ಜಿಗಳನ್ನು ಮಾತ್ರ ಪರಿಶೀಲಿಸಲಾಗುವುದು. (5) ಈ ಕೆಳಗೆ ನಮೂದಿಸಿದ ಪಠ್ಯಕ್ರಮದನ್ವಯ ಪರೀಕ್ಷೆ ತೆಗೆದುಕೊಳ್ಳಲಾಗುವುದು. ಎಲ ವಿಷಯಗಳಲ್ಲೂ ಉತ್ತೀರ್ಣನಾಗುವುದು ಕಡ್ಡಾಯವಾಗಿದೆ.

**ಭಾಗ–1 :** * ಪವಿತ್ರ ಖುರ್‌ಆನ್ ನಾಝೀರ (ಮೌಖಿಕ) ಸಂಪೂರ್ಣ, ಭಾಗ 1, ಅನುವಾದ ಸಹಿತ.
* ಚಾಲೀಸ್ ಜವಾಹರ್ ಪಾರೆ, ಅರ್ಕಾನೆ ಇಸ್ಲಾಂ, ನಮಾಝ್ ಮುಕಮ್ಮಲ್ ಬಾತರ್ಜುಮೆ.

**ಭಾಗ–2 :** * ಕಿಶ್ತಿ–ನೂಹ್, ಬರಕಾತುದ್ದುಆ, ದೀನೀ ಮೂಲೂಮಾತ್. (30 ಅಂಕಗಳು)

**ಭಾಗ–3 :** * ಇಂಗ್ಲೀಷ್ (10+2) ಮಟ್ಟದಲ್ಲಿ, (20 ಅಂಕಗಳು)

**ಭಾಗ–4 :** * ಗಣಿತ ಮೆಟ್ರಿಕ್ ಮಟ್ಟದಲ್ಲಿ (20 ಅಂಕಗಳು)

**ಭಾಗ–5 :** * ಸಾಮಾನ್ಯ ಜ್ಞಾನ (ಜಿ.ಕೆ.) (10 ಅಂಕಗಳು)

**ಭಾಗ–6 :** * ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನವಿರುವುದು.

**ಭಾಗ–7 :** * ಲಿಖಿತ ಪರೀಕ್ಷೆ, ಕಂಪ್ಯೂಟರ್ ಟೆಸ್ಟ್ ಹಾಗೂ ಸಂದರ್ಶನದಲ್ಲಿ ಉತ್ತೀರ್ಣರಾದವರಿಗೆ ಮಾತ್ರ ನೂರ್ ಹಾಸ್ಪಿಟಲ್ ಖಾದಿಯಾನ್‌ನಲ್ಲಿ ಆರೋಗ್ಯ ತಪಾಸಣೆ ಮಾಡಲಾಗುವುದು ಮತ್ತು ನೂರ್ ಹಾಸ್ಪಿಟಲ್ ಖಾದಿಯಾನಿನ ಆರೋಗ್ಯ ಸಮಿತಿ ವರದಿಯ ಪ್ರಕಾರ ಆರೋಗ್ಯವಾಗಿರುವ ಅಭ್ಯರ್ಥಿಗಳಿಗೆ ಮಾತ್ರ ಸೇವೆಗೆ ಅರ್ಹರು ಎಂದು ಪರಿಗಣಿಸಲಾಗುವುದು. (8) ಆಯ್ಕೆಗೊಂಡ ಪಕ್ಷದಲ್ಲಿ ಅಭ್ಯರ್ಥಿಯು ತನ್ನ ವಸತಿ ಏರ್ಪಾಡು ತಾನೇ ಮಾಡಿಕೊಳ್ಳಬೇಕಾಗುತ್ತದೆ. (9) ಖಾದಿಯಾನಿಗೆ ಬರುವ, ಹೋಗುವ ಖರ್ಚು ಅಭ್ಯರ್ಥಿಯದ್ದೇ ಆಗಿರುವುದು.

(**ಸೂಚನೆ:** ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ತಾರೀಖು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:**

ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ – 143516

ಮೊಬೈಲ್ : 09682627592, 09682587713

ಕಛೇರಿ: 01872–501130: ಈಮೇಲ್: diwan@qadian.in

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

**ಸದ್‌ಖತುಲ್ ಫಿತ್ರ್**

ಅಲ್‌ಹಮ್ದುಲಿಲ್ಲಾಹ್ ಪವಿತ್ರ ರಂಝಾನ್ ಏಪ್ರಿಲ್ ಮಾಹೆಯ ಎರಡನೇ ವಾರದಿಂದ ಪ್ರಾರಂಭವಾಗುವುದು. ಇಸ್ಲಾಂ ಧರ್ಮದಲ್ಲಿ ಒಂದು ಸಾರಿ ಧಾನ್ಯ (ಅಂದರೆ 2 ಕಿಲೋ 750 ಗ್ರಾಂ) ಫಿತ್ರಾನ ನೀಡುವ ನಿಗದಿತ ಪ್ರಮಾಣವಾಗಿದೆ. ಜಮಾಅತ್ ಬಾಂಧವರು ನಿಗದಿತ ಪ್ರಮಾಣ ಪ್ರಕಾರ ಪವಿತ್ರ ರಂಝಾನಿನ ಮೊದಲ ಅಥವಾ ಎರಡನೆಯ ಅಶ್ರಾ (ದಶಕ) ದ ಒಳಗಾಗಿ ನೀಡಲು ಪ್ರಯತ್ನ ಮಾಡಬೇಕು.

ಅಂದ ಹಾಗೆ ಭಾರತದ ವಿವಿಧ ರಾಜ್ಯಗಳಲ್ಲಿ ಧಾನ್ಯ (ಗೋಧಿ, ಅಕ್ಕಿ) ಯ ಬೆಲೆಗಳು ವಿವಿಧ ರೀತಿಯಲ್ಲಿರುತ್ತವೆ. ಆದುದರಿಂದ ತನ್ನ ಸ್ಥಳೀಯ ಬೆಲೆಯನುಸಾರ ಪ್ರಮಾಣ ನಿಗದಿಪಡಿಸಿ (ಎರಡು ಕಿಲೋ 750 ಗ್ರಾಂ) ಅದರಂತೆ ಫಿತ್ರಾನ ಮೊತ್ತ ನೀಡಬೇಕಾಗಿದೆ. ಪಂಜಾಬ್ ರಾಜ್ಯಕ್ಕೆ ಈ ವರ್ಷ ಸದಖತುಲ್–ಫಿತ್ರ್ ಪ್ರಮಾಣವು ಈಸಲ ಒಬ್ಬರಿಗೆ ಐವತ್ತೈದು (ರೂ. 55/–) ಗಳನ್ನು ನಿಗದಿಪಡಿಸಲಾಗಿದೆ.

ಸ್ಥಳೀಯ ಜಮಾಅತಿನಲ್ಲಿ ಬಡವರು ಹಾಗೂ ಅದಕ್ಕೆ ಅರ್ಹರು ಇದ್ದಲ್ಲಿ ಸದಖತುಲ್ ಫಿತ್ರ್‌ನ ಒಟ್ಟು ಮೊತ್ತದಿಂದ 90% ವರೆಗಿನ ಮೊತ್ತ ಮಜ್ಲಿಸ್ ಆಮಿಲದ (ಕಾರ್ಯಕಾರಿಣಿ ಸಭೆ)ಯ ಸಲಹೆ ಹಾಗೂ ನಿರ್ಣಯದ ನಂತರ ವಿತರಿಸಬಹುದಾಗಿದೆ. ಉಳಿದ ಮೊತ್ತ ಕೇಂದ್ರಕ್ಕೆ ರವಾನಿಸಬೇಕು. ಯಾವ ಜಮಾಅತಿನಲ್ಲಿ ಬಡವರು, ಅರ್ಹರು ಇಲ್ಲವೋ, ಆ ಜಮಾಅತಿನ ವಸೂಲಾದ ಎಲ್ಲಾ ಮೊತ್ತ (ಹಣ) ಸದರ್ ಅಂಜುಮನ್ ಅಹ್ಮದಿಯಾ, ಜಮಾಅತಿನ ಖಾತೆಗೆ ಬರತಕ್ಕದ್ದು.

ನೆನಪಿರಲಿ, ಫಿತ್ರಾನದ ಹಣವು ಮಸೀದಿ ಮುಂತಾದ ಇತರ ಅಗತ್ಯಗಳಿಗಾಗಿ ಖರ್ಚು ಮಾಡುವ ಅನುಮತಿ ಇರುವುದಿಲ್ಲ.

**ಈದ್ ಫಂಡ್**

ಈ ಚಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲಘಟ್ಟದಿಂದ ಜಾರಿಯಲ್ಲಿದೆ. ಈ ಫಂಡಿನ ಉದ್ದೇಶವೇನಿತ್ತೆಂದರೆ, ಸಂತೋಷದ ಸಂದರ್ಭಗಳಲ್ಲಿ ಮನುಷ್ಯನು ಯಾವ ರೀತಿ ತನ್ನ ವೈಯಕ್ತಿಕ ಸಂತೋಷಗಳಿಗಾಗಿ ಹೊಸ ಉಡುಪು, ಸ್ವಾದಭರಿತ ಊಟ ಮತ್ತು ಅತಿಥಿ ಸತ್ಕಾರಗಳಿಗಾಗಿ ವ್ಯಯ ಮಾಡುವರು ಮತ್ತು ಇತರರಿಗೆ ಪಾರಿತೋಷಕ ಉಡುಗೊರೆಗಳನ್ನು ನೀಡುವರೋ, ಅದೇ ರೀತಿ ಆ ಸಂತೋಷದಲ್ಲಿ ಧರ್ಮದ ಅಗತ್ಯಗಳ ಬಗ್ಗೆಯೂ ಗಮನ ವಹಿಸಬೇಕಾಗಿದೆ. ಅಹ್ಮದಿ ಬಾಂಧವರಂತೂ ಬೈಅತ್ತಿನಲ್ಲಿ "ಧರ್ಮವನ್ನು ಲೌಕಿಕ ಕಾರ್ಯಗಳ ಮೇಲೆ ಪ್ರಧಾನ್ಯತೆ ನೀಡುವೆನು" ಎಂಬ ವಚನ ನೀಡಿರುತ್ತಾರೆ. ಆದುದರಿಂದ ಪ್ರತಿಯೋರ್ವ ಅಹ್ಮದಿಯು ಆಶಯ ಹೊಂದುವುದೇನೆಂದರೆ ಅವರು ಸಂತೋಷದ ಈ ಹಬ್ಬ ದಿನಗಳಲ್ಲಿ ಪ್ರತಿಯೊಂದು ಅಹ್ಮದಿಯರಿಂದ ಆಶಿಸುವುದೇನಂದರೆ ಅವರು ಸಂತೋಷದ ಈ ಹಬ್ಬದ ದಿನಗಳಲ್ಲಿ ಧರ್ಮದ ಅಗತ್ಯಗಳಿಗೂ ಸ್ಪಂದಿಸುವರು. ಈ ಉದ್ದೇಶಕ್ಕಾಗಿ ಹಝುರತ್ ಮಸೀಹ್ ಮೌಊದ್[ಅ] ಅವರ ಕಾಲದಲ್ಲಿ ಆದಾಯ ಉಳ್ಳ ಅಹ್ಮದಿ ಬಾಂಧವರು ಒಬ್ಬನಿಗೆ ಒಂದು ರೂಪಾಯಿಯಂತೆ ಫಂಡ್ ನೀಡುತ್ತಿದ್ದರು. ಅದು ಆ ಸಮಯಕ್ಕೆ ದೊಡ್ಡ ಮೊತ್ತವೇ ಆಗಿತ್ತು. ಇದೀಗ ಈದುಲ್ ಫಿತ್ರ್ ಸಮೀಪಿಸುತ್ತಿದೆ. ಆದುದರಿಂದ ತಮ್ಮ ಅನುಕೂಲದ ಪ್ರಕಾರ ಹಬ್ಬದ ದಿನದಂದು ಆದಷ್ಟು ಹೆಚ್ಚು ಮೊತ್ತ ಈ ಫಂಡ್‌ನಲ್ಲಿ ನೀಡಬೇಕಾಗಿದೆ. ಈದ್ ಫಂಡ್ ಈದ್ ನಮಾಝಿಗಿಂತ ಮುಂಚೆ ಯಾವುದೇ ಸಮಯದಲ್ಲಿ ಪಾವತಿಸಬಹುದಾಗಿದೆ. ಇದು ಕೇಂದ್ರಕ್ಕೆ ಸಂಬಂಧಿಸಿದ ಚಂದಾ ಆಗಿದೆ. ಪಡೆದ ಎಲ್ಲಾ ಹಣವು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಗೆ ಪಾವತಿಸುವುದು ಅನಿವಾರ್ಯವಾಗಿದೆ. ಅದರಿಂದ ಸ್ಥಳೀಯರಿಗೆ ಖರ್ಚು ಮಾಡಲು ಅನುಮತಿ ಇರುವುದಿಲ್ಲ. ಜಝಾಕು ಮುಲ್ಲಾಅತ್ಹಾಲ.

**(ಖಾಯಂ ಮಕಾಮ್ ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 22 April 2021, Issue No. 16

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

***ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)***

**(ಬದರ್ ಸಂಚಿಕೆ 15ರ ವರದಿಯ ಉಳಿದ ಭಾಗ)**

**ಕಾರ್ಯಕರ್ತರ ವೀಕ್ಷಣೆ ಮತ್ತು ಜಲ್ಸ ಸಾಲಾನ ಜರ್ಮನಿ 2015 ವ್ಯವಸ್ಥೆ ಪರಿಶೀಲನೆ**

ಇಂದು ಕಾರ್ಯಕ್ರಮದನ್ವಯ 160 ಕಿ.ಮೀ ದೂರದಲ್ಲಿರುವ ಜಲ್ಸ ಸ್ಥಳ KARLSRUHE ಗೆ ಪ್ರಯಾಣಿಸಬೇಕಾಗಿತ್ತು. 6.20 ಗಂಟೆಗೆ ಹುಝೂರ್ ಆಗಮಿಸಿದರು. ಜಲ್ಸ ಆಯೋಜನೆಗೊಳ್ಳುವ ಈ ಸ್ಥಳ K. MESSE ಎನ್ನಲಾಗುತ್ತದೆ. ಅದರ ಒಟ್ಟು ವಿಸ್ತೀರ್ಣ ಒಂದು ಲಕ್ಷ 50 ಸಾವಿರ ಚದರ ಮೀಟರ್ ಆಗಿದೆ. ಅದರ covered ಭಾಗ 70 ಸಾವಿರ ಚ. ಮೀಟರ್ ಆಗಿದೆ. ಅದರಲ್ಲಿ 4 ದೊಡ್ಡ ಸಭಾಂಗಣಗಳಿವೆ. ಈ ನಾಲ್ಕು ಸಭಾಂಗಣಗಳು A.C. (ಹವಾನಿಯಂತ್ರಿತ) ಆಗಿವೆ. ಪ್ರತಿ ಸಭಾಂಗಣದ ವಿಸ್ತೀರ್ಣ 1250 ಚ. ಮೀಟರ್ ಮತ್ತು ಪ್ರತಿ ಸಭಾಂಗಣದಲ್ಲಿ ಹನ್ನೆರಡು ಸಾವಿರ ಆಸನಗಳ ಮೇಲೆ ಜನರು ಕುಳಿತುಕೊಳ್ಳಬಹುದಾಗಿದೆ. ಪ್ರತಿ ಸಭಾಂಗಣದಲ್ಲಿ ಹದಿನೆಂಟು ಸಾವಿರ ಜನರು ನಮಾಝ್ ನಿರ್ವಹಿಸಬಹುದಾಗಿದೆ. ಒಟ್ಟಿನಲ್ಲಿ ಈ ನಾಲ್ಕು ಸಭಾಂಗಣಗಳಿಗೆ 128 ಶೌಚಾಲಯಗಳಿವೆ. ಇಲ್ಲಿ ಹತ್ತು ಸಾವಿರ ವಾಹನಗಳನ್ನು parking ಮಾಡುವ ಸ್ಥಳವಿದೆ.

ಸುಮಾರು ಒಂದು ಗಂಟೆ 40 ನಿಮಿದ ಪ್ರಯಾಣದ ನಂತರ 5 ಗಂಟೆಗೆ ಹುಜೂರ್ ಜಲ್ಸ ಸ್ಥಳ ತಲುಪಿದರು. ಮು. ಮುಹಮ್ಮದ್ ಇಲ್ಯಾಸ್ ಸಾಹಿಬ್ ಮಜೂಕ್ ಅಫಸರ್ ಜಲ್ಸ ಸಾಲಾನ ಜರ್ಮನಿ ಮತ್ತು ಮುಕರ್ರಮ್ ಹಾಫಿಝ್ ಮುಝಫ್ಫರ್ ಅಹ್ಮದ್ ಇಮ್ರಾನ್ ಹಸ್ತಲಾಘವ ಮಾಡಿದರು. ಹುಝೂರ್ (ಅಬಿಅ) ಒಳಗೆ ಪ್ರವೇಶ ಮಾಡಿದಾಗ ಕಾರ್ಯಕರ್ತರು ಪೂರ್ಣ ಉತ್ಸಾಹದಿಂದ ಘೋಷಣೆ ಹಾಕಿದರು.

ಅನಂತರ ಜಲ್ಸ ಸಾಲಾನ ವ್ಯವಸ್ಥೆಗಳ ಪರಿಶೀಲನೆ ಪ್ರಾರಂಭವಯಿತು. ನಾಯಿಬ್ ಅಫಸರ್ ಜಲ್ಸ ಸಾಲಾನ ಒಂದು ಸಾಲಿನಲ್ಲಿ ನಿಂತುಕೊಂಡಿದ್ದರು. ಹುಝೂರ್ ಪ್ರೀತಿಯಿಂದ ಅವರ ಬಳಿಯಿಂದ ಹೋದರು ಮತ್ತು ಕೈ ಮೇಲಕ್ಕೆತ್ತಿ ಅಸ್‌ಸಲಾಮು ಅಲೈಕುಂ ಹೇಳಿದರು. ಪ್ರಾರಂಭದಲ್ಲಿ ಖಿದ್ಮತ್ ಖಲ್ಕ್ ವಿಭಾಗ, ಕಾರ್ಡ್ ಚೆಕಿಂಗ್ ಸಿಸ್ಟಂ ಮತ್ತು ಅಫ್‌ಸರ್ ಸಾಹಿಬ್ ಜಲ್ಸ ಸಾಲಾನ ಮತ್ತು ಜರ್ಮನಿಯಿಂದ ಹೊರಗಿನ ಅತಿಥಿಗಳ ವಸತಿನಿಲಯದ ಕಚೇರಿಗಳಿದ್ದವು. ಹುಝೂರ್ ಈ ಕಚೇರಿಗಳ ಬಗ್ಗೆ ಮತ್ತು ವಿಭಾಗಗಳ ಬಗ್ಗೆ ವಿಚಾರಿಸಿದರು ಮತ್ತು ಅವರ ಬಳಿಯಿಂದ ಹೋಗುತ್ತ MTA ವಿಭಾಗಕ್ಕೆ ಆಗಮಿಸಿದರು ಮತ್ತು ಇಲ್ಲಿ MTA ಯ ವಿವಿಧ ವಿಭಾಗಗಳನ್ನು ವೀಕ್ಷಿಸಿದರು.

MTA ಜರ್ಮನಿ ಈ ವರ್ಷವು drone video Camera ಬಳಸಿದ್ದರು. ಈ ಕ್ಯಾಮರಾ ರಿಮೋಟ್ ಕಂಟ್ರೋಲ್ ಮೂಲಕ ವಾಯುವಿನಲ್ಲಿ ಎತ್ತರಕ್ಕೆ ಏರುತ್ತದೆ. ಆ ಮೂಲಕ ಜಲ್ಸದ ಹೊರಗಿನ ದೃಶ್ಯಗಳನ್ನು ತೋರಿಸಲಾಗುತ್ತದೆ.

ವ್ಯವಸ್ಥಾಪಕರು ಹುಝೂರರ ಉಪಸ್ಥಿತಿಯಲ್ಲಿ ಆ ಕ್ಯಾಮರವನ್ನು ಗಾಲಿಯಲ್ಲಿ ಎತ್ತರಕ್ಕೇರಿಸಿದರು. ಅದು ಬಹು ಎತ್ತರದವರೆಗೆ ಹೋಗುತಿತ್ತು. ಹುಝೂರ್ MTA ಪ್ರಸಾರ ಕಾರ್ಯಕ್ರಮಗಳ ಬಗ್ಗೆ ಇತರ ಸಂಬಂಧಿತ ಕಾರ್ಯಗಳ ಬಗ್ಗೆ ಕೇಳಿದರು ಮತ್ತು ನಿರ್ದೇಶನಗಳನ್ನು ನೀಡಿದರು.

ಅನಂತರ ಹುಝೂರ್ ಗ್ರಂಥಗಳ ಸ್ಟೋರ್ ಮತ್ತು ಸ್ಟಾಲ್‌ಗಳನ್ನು ವೀಕ್ಷಿಸಿದರು. ಇಲ್ಲಿ ಸುಸಜ್ಜಿತ ರೀತಿಯಲ್ಲಿ ಮೇಜುಗಳ ಮೇಲೆ ಮತ್ತು ವಿವಿಧ stands ಗಳ ಮೇಲೆ ಗ್ರಂಥಗಳನ್ನು ಇಡಲಾಗಿತ್ತು. ಅಲ್ಲಿಂದ ಸುಲಭ ರೀತಿಯಲ್ಲಿ ಗ್ರಾಹಕರು ಪುಸ್ತಕಗಳನ್ನು ಪಡೆಯಬಹುದಾಗಿತ್ತು.

ವೀಕ್ಷಣೆಯ ನಡುವೆ Humanity First ವಿಭಾಗದ ಕಚೇರಿಗೆ ಹುಝೂರ್ ಆಗಮಿಸಿದರು. ಅಲ್ಲಿರುವ ವಿವಿಧ ವಸ್ತುಗಳನ್ನು ಮತ್ತು ಅದರ ಕಾರ್ಯಕ್ರಮಗಳ ಕುರಿತು ಚೇರ್‌ಮನ್ H.F. ಜರ್ಮನಿಯರೊಡನೆ ವಿಚಾರಿಸಿ ಅಲ್ಲಿಂದ ಕೆಲವು ವಸ್ತುಗಳನ್ನು ಖರೀದಿಸಿ ನಿರ್ದೇಶನಗಳನ್ನು ನೀಡಿದರು.

ನೂರು ಮಸೀದಿಗಳ ಆಸ್ತಿ ವಿಭಾಗವನ್ನು ಸಹ ಹುಝೂರ್ ವೀಕ್ಷಿಸಿದರು. ಇಲ್ಲಿ ಜರ್ಮನಿಯಲ್ಲಿ ನಿರ್ಮಾಣಗೊಳ್ಳುವ ವಿಭಿನ್ನ ಮಸೀದಿಗಳ ನಮೂನೆ ಇಡಲಾಗಿದೆ. ಅಲ್ಲಿಯೇ ಮಸೀದಿಯ ನಿರ್ಮಾಣದ ಉಪಯೋಗಿಸಲ್ಪಡುವ ಸಾಮಾಗ್ರಿಗಳ ನಮೂನೆಯೂ ಇಡಲಾಗಿತ್ತು.

ಅದೇ ಕ್ಷೇತ್ರದಲ್ಲಿ ವ್ಯವಸಾಯ ವಿಭಾಗ, ವಕ್ಫ್ ನೌ. ಉಮರೇ ಆಮಾ ಹಾಗೂ ರಿಶ್ತೆನಾಥ ವಿಭಾಗಗಳ ಕಚೇರಿಯು ಸ್ಥಾಪಿತವಾಗಿದ್ದವು.

ಅನಂತರ ಹುಝೂರ್ store ಗೆ ಆಗಮಿಸಿದರು. ಅಲ್ಲಿ ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಲಾಗಿತ್ತು. ಇಲ್ಲಿಂದ ಅಗತ್ಯಗನುಸಾರವಾಗಿ ವಸ್ತುಗಳನ್ನು ವಿವಿಧ ವಿಭಾಗಗಳಿಗೆ ಸರಬರಾಜು ಮಾಡಲಾಗುತ್ತಿತ್ತು.

ಅನಂತರ ಹುಝೂರ್ ಅತಿಥಿಗಳಿಗೆ ಊಟ ಮಾಡಿಸುವ ವ್ಯವಸ್ಥೆಯ ಸಭಾಂಗಣಕ್ಕೆ ತೆರಳಿದರು. ಈ ವ್ಯವಸ್ಥೆ ಅಡಿಯಲ್ಲಿ ಏಕಕಾಲದಲ್ಲಿ ಸಾವಿರಾರು ಜನರು ಉಟ ಮಾಡಬಹುದಾಗಿತ್ತು. ಮೇಜಿನ ಮೇಲೆಯೇ ನೀರಿನ ಬೋಟಲ್ ಮತ್ತು ಲೋಟ ಇತ್ಯಾದಿಗಳನ್ನು ಇಡಲಾಗಿತ್ತು. ಏಕೆಂದರೆ ಊಟದ ಮಧ್ಯ ನೀರು ಪಡೆಯಲು ಇತರ ಭಾಗಕ್ಕೆ ಹೋಗುವಂತಾಗಬಾರದು ಎಂದು.

ರಾತ್ರಿಯ ಊಟ ತಯಾರಾಗಿ ಈ ಸಭಾಂಗಣಕ್ಕೆ ಬಂದಾಗಿತ್ತು. ಹುಝೂರ್ ಪ್ರೀತಿಪೂರ್ವಕವಾಗಿ ಊಟದ ಮಟ್ಟ ಪರಿಶೀಲಿಸಿದರು. ಆಲುಗಡ್ಡೆ, ಮಾಂಸ ಅಡುಗೆ ಮಾಡಲಾಗಿತ್ತು ಮತ್ತು ಜೊತೆಯಲ್ಲಿ ನಾನ್ (ರೊಟ್ಟಿ) ಇಡಲಾಗಿತ್ತು. ಅದು ಅತಿಥಿಗಳಿಗೆ ಕೊಡಬೇಕಾಗಿತ್ತು. ಹುಝೂರ್ ಆಲೂಗಡ್ಡೆ ಮಾಂಸ ಒಂದು ಪ್ಲೇಟಿನಲ್ಲಿ ಹಾಕಿ ಅದು ಸರಿಯಾಗಿ ಬೆಂದಿದೆಯೋ ಇಲ್ಲವೆ ಎಂದು ಪರೀಕ್ಷಿಸಿ ಹುಝೂರ್ ವ್ಯವಸ್ಥಾಪಕರಿಗೆ ಸಲಹೆಗಳನ್ನು ನೀಡಿದರು.

ಅನಂತರ ಹುಝೂರ್ ಲಂಗರ್ ಖಾನ (ಊಟ ತಯಾರಿಸುವ ಸ್ಥಳ) ಸಹ ವೀಕ್ಷಿಸಿದರು. ಪ್ರಪ್ರಥಮವಾಗಿ ಹುಝೂರ್ ಮಾಂಸ ತುಂಡರಿಸುವುದು, ಸರಬರಾಜು ಮತ್ತು ಮಾಂಸವನ್ನು ಸಂಗ್ರಹಿಸಿಡಲಾಗುವ ಸ್ಥಳವನ್ನು ನೋಡಿದರು. ಒಂದು ದೊಡ್ಡ Freezer ಇದೆ. ಅಲ್ಲಿ ಏಕಕಾಲಕ್ಕೆ ಒಂದು ನೂರಕ್ಕಿಂತ ಹೆಚ್ಚು ಕುರಿಗಳ ಮಾಂಸವನ್ನು. ಒಂದು ವಿಶೇಷವಾದ ಉಷ್ಣಾಂಶದ ಮೇಲೆ Freez ಮಾಡಲಾಗುತ್ತದೆ. ಲಂಗರ್ ಖಾನ ವೀಕ್ಷಿಸುವ ಮಧ್ಯ ಹುಝೂರ್ ಅಡುಗೆ ಮಾಡುವ ವ್ಯವಸ್ಥೆಯನ್ನು ವೀಕ್ಷಿಸಿದರು ಮತ್ತು ಊಟದ ಗುಣ ನೋಡಿದರು. ಹುಝೂರ್ ಆಲುಗಡ್ಡೆ, ಮಾಂಸ ಮತ್ತು ಬೇಳೆ ಎರಡರಿಂದಲೂ ಒಂದೊಂದು ಮತ್ತು ಸೇವಿಸಿ ನೋಡಿದರು. ಊಟದ ಕುರಿತು ವ್ಯವಸ್ಥಾಪಕರೊಂದಿಗೆ ವಿಚಾರಿಸಿದರು.

ಲಂಗರ್ ಖಾನಾದ ಕಾರ್ಯಕರ್ತರು ಒಂದು ಬೃಹತ್ ರೂಪದ ಕೇಕ್ ಮಾಡಿಸಿದ್ದರು. ಹುಝೂರ್ ಆತ್ಮೀಯವಾಗಿ ಆ ಖುದ್ದಾಮರು ಕೇಕ್‌ಗಳನ್ನು ಕತ್ತರಿಸಿ ಕೊಟ್ಟರು. ಲಂಗರ್ ಖಾನದ ಹೊರಗೆ "ದೇಸ್ ವಾಷಿಂಗ್ ಮಿಶಿನ್ ಹಾಕಲಾಗಿತ್ತು. ಈ ಮಿಷಿನ್ ಹಿಂದಿನ 8 ವರ್ಷಗಳಿಂದ ಹಾಕಲಾಗುತ್ತಿದೆ. ಪ್ರತಿ ವರ್ಷ ಅದರಲ್ಲಿ ಸುಧಾರಣೆ ಆಗುತ್ತದೆ. ಪ್ರಾರಂಭದ ಸ್ಥಿತಿಯಲ್ಲಿ ಮೆಷಿನ್ ಮೇಲೆ ದೋಸೆ, ಇಡ್ಲಿ ನಂತರ ಒಂದು ಬಟನ್ ಒತ್ತಬೇಕಾಗಿತ್ತು. ಆಗ ದೇಶ್ ಸ್ವಚ್ಚಗೊಳ್ಳಲು ಪ್ರಾರಂಭವಾಗುತ್ತಿತ್ತು. ಆದರೆ ಈಗ ತನ್ನಿತಾನೇ ಕಾರ್ಯ ಪ್ರಾರಂಭವಾಗುವುದು. ಇಂತಹ ಒಂದು ಸೆನ್‌ಸರ್ ಸಿಸ್ಟಮ್ ಅಳವಡಿಸಲಾಗಿದೆ. ಅದರಿಂದ Automatic Funciton ಪ್ರಾರಂಭವಾಗುತ್ತದೆ. ಹಾಗೆಯೇ ಹಿಂದೆ ಒಂದು ಒಂದೇ ದೇಗ್ ಸ್ವಚ್ಚಗೊಳ್ಳುತ್ತಿತ್ತು. ಆದರೆ ಈಗ ಏಕಕಾಲದಲ್ಲಿ ಹಲವು ದೇಗಗಳು ಸ್ವಚ್ಚಗೊಳ್ಳುತ್ತವೆ.

ಲಂಗರ್ ಖಾನ್ ಮತ್ತು ದೇಗ್ ವಾಷಿಂಗ್ ಮೆಷಿನ್ ವೀಕ್ಷಿಸಿದರೆ ನಂತರ ಹುಜೂರ್ ಖಾಸಗಿ ಟೆಂಟ್‌ಗಳೆಡೆಗೆ ಆಗಮಿಸಿ ವ್ಯವಸ್ಥೆಯನ್ನು ವೀಕ್ಷಿಸಿದರು. ಹುಝೂರ್ ಟೆಂಟ್‌ಗಳ ಮಧ್ಯ ಭಾಗದಿಂದ ತೆರಳಿದರು. ವಿವಿಧ ಕುಟುಂಬಗಳು ತನ್ನ ಟೆಂಟ್‌ಗಳ ಬಳಿ ನಿಂತಿದ್ದರು. ಕೆಲವರು ಟೆಂಟ್ ಹಾಕುವವರಿದ್ದರು. ಎಲ್ಲರೂ ತಮ್ಮ ಕೈಗಳನ್ನು ಎತ್ತಿ ಹುಝೂರರಿಗೆ ಸಲಾಂ ಹೇಳೀದರು. ಹುಝೂರ್ ಪ್ರೀತಿಪೂರ್ವಕವಾಗಿ ಸಲಾಂಗಳಿಗೆ ಉತ್ತರವನ್ನು ನೀಡುತ್ತಾ ಕೆಲವರೊಡನೆ ಮಾತುಗಳನ್ನಾಡಿದರು. ವಿವಿಧ ಆಕಾರಗಳ ಟೆಂಟ್‌ಗಳಿದ್ದವು. ಕೆಲ ಟೆಂಟ್‌ಗಳು ಎಷ್ಟು ದೊಡ್ಡದಾಗಿದ್ದವು ಎಂದರೆ ಅದರಲ್ಲಿ ಹತ್ತರಿಂದ ಹದಿನೈದು ಜನರು ಬರಬಹುದಾಗಿತ್ತು.

ಹುಝೂರ್ ಒಂದು ಟೆಂಟ್‌ನ ಸಮೀಪಕ್ಕೆ ಹೋಗಿ ಅದರಲ್ಲಿ ಎಷ್ಟು

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.